**ದಿನಾಂಕ 21.10.2021 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಶ್ರೀಮತಿ ಶೋಭಾ ವಕೀಲರಿಂದ ಎದುರುದಾರ 2 ರವರ ಪರವಾಗಿಃ**

2. ದಿನಾಂಕ 17.11.2011 ರಂದು ಎದುರುದಾರ 51 ಚಂದ್ರ ಅನ್ನುವವರು ಎದುರುದಾರ 47 ಶೋಭಾ ಇವರಿಗೆ ಮಾಡಿಕೊಟ್ಟ ದಾನ ಪತ್ರದ ಕಾಪಿ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.55 ಅಂತ ಗುರುತಿಸಲಾಯಿತು. ಅದೇ ರೀತಿ ಒ.ಎಸ್.342/2015 ರಲ್ಲಿಯ ದಾವಾ ಪತ್ರ ಕಾಪಿ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.56 ಅಂತ ಗುರುತಿಸಲಾಯಿತು. ಜಮೀನು ಪಹಣಿ ಹಾಜರು ಮಾಡಿರುತ್ತೇನೆ. ಅವುಗಳನ್ನು ನಿಡಿ.57, 58, 59, 60, 61 ಅಂತ ಗುರುತಿಸಲಾಯಿತು.

ಆದ್ದರಿಂದ ಮಾನ್ಯ ನ್ಯಾಯಾಲಯದವರು ನಮಗೆ ಬರಬೇಕಾದ ಪರಿಹಾರ ಹಣ ನಮಗೆ ಕೊಡಿಸಬೇಕು ಅಂತ ವಿನಂತಿಸುತ್ತೇನೆ.

**ಎ.ಇಮಾನ್ಯೂಯಲ್ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

**ದಿನಾಂಕ 16.11.2021 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎ.ಇಮಾನ್ಯೂಯಲ್ ವಕೀಲರಿಂದ ಎದುರುದಾರ 6, 8, 9, 10 ರವರ ಪರವಾಗಿಃ**

3. ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆಯಲ್ಲಿ ಪತ್ರ ಬರೆಯಲು ಬರುತ್ತದೆ. ನಾನು ಹುಟ್ಟಿದಾಗಿನಿಂದ ವ್ಯವಸಾಯ ಕೆಲಸ ಮಾಡುತ್ತಾ ಬಂದಿರುತ್ತೇನೆ. ನಮ್ಮ ತಾಯಿಗೆ ಸೇರಿದ ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ರಲ್ಲಿ 14 ಗುಂಟೆ ಇದೆ ಹಾಗೂ ಸರ್ವೆ ನಂ. 146 ರಲ್ಲಿ 10 ಗುಂಟೆ ಜಮೀನು ಇರುತ್ತದೆ. ಆ 2 ಜಮೀನು ಖಾತೆ ಪಹಣಿ ನಮ್ಮ ತಾಯಿ ರತ್ನಮ್ಮ ಹೆಸರಿನಲ್ಲಿ ಇರುತ್ತವೆ. ನಮ್ಮ ಮುತ್ತಾತ ಚೌಡೇಗೌಡ ಅನ್ನುವವರು ನಮ್ಮ ತಾಯಿ ರತ್ನಮ್ಮನಿಗೆ ಜೀವನೋಪಾಯಕ್ಕಾಗಿ ಆಸ್ತಿ ಕೊಟ್ಟಿರುತ್ತಾರೆ. ನಮ್ಮ ತಾಯಿ ರತ್ನಮ್ಮ ಇವರಿಗೆ ನಮ್ಮ ಮುತ್ತಾತ ಚೌಡೇಗೌಡ ಯಾವ ರೀತಿಯ ದಾಖಲೆ ಬರೆದುಕೊಟ್ಟಿರುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ. ನಮ್ಮ ತಾಯಿಗೆ ಸೇರಿದ 14 ಗುಂಟೆ ಸರ್ವೆ ನಂ.131/8 ರಲ್ಲಿ ಇರುತ್ತದೆ. ಸರ್ವೆ ನಂ.131/8 ಕ್ಷೇತ್ರ 14 ಗುಂಟೆ ನಮ್ಮ ತಾಯಿ ರತ್ನಮ್ಮನ ಹೆಸರಿನಲ್ಲಿ ಯಾವ ದಾಖಲೆ ಆಧಾರದ ಮೇರೆಗೆ ಕಂದಾಯ ದಾಖಲೆಯಲಿ ಬಂದಿತ್ತು ಅಂತ ನನಗೆ ಹೇಳಲು ಬರುವುದಿಲ್ಲ. ಈ ರೀತಿ 30 -40 ವರ್ಷಗಳಿಂದ ರತ್ನಮ್ಮನ ಹೆಸರಿನಲ್ಲಿ 14 ಗುಂಟೆ ಖಾತಾ ಮುಂದುವರಿಯುತ್ತಾ ಬಂದಿದೆ. ಸರ್ವೆ ನಂ.131/8 ಕ್ಷೇತ್ರ 14 ಗುಂಟೆ ಕ್ಷೇತ್ರಕ್ಕೆ ತೋರಿಸುವ, ಚೆಕ್ ಬಂದಿ ತೋರಿಸುವ ದಾಖಲೆ ಹಾಜರು ಮಾಡಿರುವುದಿಲ್ಲ. ಸರ್ವೆ ನಂ. 131/8 ಕ್ಷೇತ್ರ 14 ಗುಂಟೆ ಇದಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ನ್ಯಾಯಾಲಯದಲ್ಲಿ ಕೇಸು ವ್ಯಾಜ್ಯ ಇರುವುದಿಲ್ಲ.

4. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ. 131 ರಲ್ಲಿ ಒಟ್ಟು 13 ಪೋಡು ಜಮೀನು ಇವೆ. ಸರ್ವೆ ನಂ. 131 ರಲ್ಲಿ ಇರುವಂತ ಪೋಡು ಜಮೀನುಗಳಿಗೆ ಕೆಲವು ಕೇಸು ನಡೆಯುತ್ತಾ ಇವೆ. ಸರ್ವೆ ನಂ.131/9, 131/2, 131/7, 131/3, 131/4, 131/5, 131/6 ಇವುಗಳಿಗೆ ನ್ಯಾಯಾಲಯದಲ್ಲಿ ವ್ಯಾಜ್ಯ ಇದೆ. ಯಾರ ಯಾರ ನಡುವೆ ಆಸ್ತಿ ವಿವಾದ ಇದೆ ಅಂತ ಹೇಳಲು ಬರುವುದಿಲ್ಲ. ಅದೇ ರೀತಿ ಯಾರ ಯಾರ ನಡುವೆ ಯಾವ ಸಿವಿಲ್ ಕೇಸ್ ಇವೆ ಅಂತ ಹೇಳಲು ಬರುವುದಿಲ್ಲ. ಸರ್ವೆ ನಂ.131 ರಲ್ಲಿ 13 ಪೋಡು ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಯಾರ ಯಾರ ಹೆಸರಿನಲ್ಲಿ ಕಂದಾಯ ದಾಖಲೆ ಇರುತ್ತವೆ ಅಂತ ಹೇಳಲು ಬರುವುದಿಲ್ಲ. ಸರ್ವೆ ನಂ. 131 ರ ಸರ್ವೆ ಸ್ಕೆಚ್ ಮತ್ತು ಟಿಪ್ಪಣಿ ನೋಡಿರುತ್ತೇನೆ. ಸರ್ವೆ ನಂ.131 ಇದಕ್ಕೆ ಸಂಬಂಧಪಟ್ಟ ಹಾಗೆ ಸರ್ವೆ ಸ್ಕೆಚ್ ಹಾಜರು ಮಾಡಿದ್ದೇನೆ. ಆದರೆ ಟಿಪ್ಪಣಿ ದಾಖಲೆ ಹಾಜರು ಮಾಡಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ರಲ್ಲಿ ಮೂಲತಃ ಒಟ್ಟು ವಿಸ್ತೀರ್ಣ 22 ಎಕರೆ 04 ಗುಂಟೆ ಇತ್ತು ಎನ್ನುವುದು ನಿಜ. ಅದರ ಪೈಕಿ 3 ಕಡೆ ಜಾಗ ವಿಸ್ತೀರ್ಣವನ್ನು ರಸ್ತೆ ಅಗಲೀಕರಣಕ್ಕಾಗಿ ಎನ್.ಹೆಚ್.275 ಹೋಗಿದೆ ಎನ್ನುವುದು ನಿಜ. ಅಂದರೆ ಸರ್ವೆ ನಂ.131/1, 131/2, 131/9 ರಲ್ಲಿ ಒಟ್ಟು 3 ಕಡೆ ಮೈಸೂರು - ಬೆಂಗಳೂರು ರಸ್ತೆಗೆ ಜಾಗ ಹೋಗಿದೆ. ಈ 3 ಸರ್ವೆ

ನಂಬರ್ ಗೆ ಸಂಬಂಧಪಟ್ಟ ಹಾಗೆ ಅಂದರೆ ಸರ್ವೆ ನಂ. 131/1 ಕ್ಷೇತ್ರ 1465 sq mtr, ಸರ್ವೆ ನಂ.131/2 ಕ್ಷೇತ್ರ 1818 sq mtr, ಸರ್ವೆ ನಂ. 131/9 ರಲ್ಲಿ 202 sq mtr ಇದಕ್ಕೆ ಸಂಬಂಧಪಟ್ಟ ಹಾಗೆ ಎಸ್.ಎಲ್.ಎ.ಒ ಇವರು ಈ ಕೇಸಲಿ ಹಣ ಜಮಾ ಮಾಡಿದ್ದಾರೆ ಎನ್ನುವುದು ನಿಜ.

5. ಈ ಕೇಸಲ್ಲಿ ಇರುವಂತ 3 ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಎಸ್.ಎಲ್.ಎ.ಒ ಇವರು ಎಷ್ಟು ಮೊತ್ತಕ್ಕೆ ಅವಾರ್ಡ್ ಮಾಡಿದ್ದಾರೆ ಅಂತ ಹೇಳುತ್ತೇನೆ. ಈ ಕೇಸಲ್ಲಿ ಕೆಲವು ಕಕ್ಷಿದಾರರು ಈಗಾಗಲೇ ಮೊದಲು ಹಣ ತೆಗೆದುಕೊಂಡಿದ್ದಾರೆ ಅನ್ನುವುದು ನಿಜ. ಅಂದರೆ ಎದುರುದಾರ 6 ಶ್ರೀಮತಿ ಮಾರ್ಗರೇಟ್ ಇವರು ಕೆಲವು ಹಣ ಎಸ್.ಎಲ್.ಎ.ಒ ಕಚೇರಿಯಲ್ಲಿ ಪಡೆದಿದ್ದಾರೆ. ಅದೇ ರೀತಿ ಎದುರುದಾರ 7 ಬಿ.ಬಿ.ರಾಜು ಅನ್ನುವವರು ಎಸ್.ಎಲ್.ಎ.ಒ ಕಚೇರಿಯಲ್ಲಿ ಪರಿಹಾರ ಹಣ ಪಡೆದಿದ್ದಾರೆ ಎನ್ನುವುದು ನಿಜ. ಈ ಕೇಸು ದಾಖಲು ಆಗುವುದಕ್ಕಿಂತ ಪೂರ್ವದಲ್ಲಿ ಎದುರುದಾರ 6, 7 ಇವರು ಪರಿಹಾರ ಹಣ ಪಡೆದಿದ್ದಾರೆ. ಎದುರುದಾರ 7 ಬಿ.ಬಿ.ರಾಜು ಇವರು ಯಾವ ತಾರೀಖಿನಂದು ಹಣ ಪಡೆದರು ಅಂತ ಹೇಳಲು ಬರುವುದಿಲ್ಲ. ಎದುರುದಾರ 7 ಬಿ.ಬಿ.ರಾಜು ಇವರು ಈ ಕೇಸು ದಾಖಲಾದ ನಂತರವೂ ಕೂಡ ಒ.ಎಸ್.46/2010 ರಲ್ಲಿ ರಾಜಿ ಮಾಡಿಕೊಂಡು ಎಸ್.ಎಲ್.ಎ.ಒ ಕಚೇರಿಯಲ್ಲಿ ಹಣ ಪಡೆದಿದ್ದಾರೆ. ಅದು ಸರ್ವೆ ನಂಬರ್ 131/2 ರಲ್ಲಿ ಇರುತ್ತದೆ. ಎದುರುದಾರ 7 ಬಿ.ಬಿ.ರಾಜು , ಚಂದ್ರಶೇಖರ , ಸುಮಿತ್ರ, ಸವಿತಾ , ಪುಟ್ಟತಾಯಮ್ಮ ಇವರು 1ನೇ ಸಿವಿಲ್ ನ್ಯಾಯಾಲಯ ಹಿರಿಯ ವಿಭಾಗ ಮಂಡ್ಯ ಇವರಲ್ಲಿ ಒ.ಎಸ್.46/2010 ರಲ್ಲಿ ರಾಜಿ ಮಾಡಿಕೊಂಡು ಹಣ ಪಡೆದಿರುತ್ತಾರೆ. ಈ ರೀತಿ ರಾಜಪಿ ಮಾಡಿಕೊಂಡ ವಿಚಾರವನ್ನು ಸಂಬಂಧಪಟ್ಟ ಕಕ್ಷಿದಾರರು ಒ.ಎಸ್.46/2010 ರಲ್ಲಿ ಕೋರ್ಟಿಗೆ ತಿಳಿಸಿದ್ದಾರೆ. ಒ.ಎಸ್.46/2010 ರಲ್ಲ ಆದ ರಾಜಿಗೆ ಸಂಬಂಧಪಟ್ಟ ದಾಖಲೆ ಈ ಕೇಸಲ್ಲಿ ಹಾಜರು ಮಾಡಲು ನಮಗೆ ತೊಂದರೆ ಇರುವುದಿಲ್ಲ. ಒ.ಎಸ್.46/2010 ರಲ್ಲಿ ಎದುರುದಾರ 7 ಮಾರ್ಗರೇಟ್ ಇವರು ಪಾರ್ಟಿಯಾಗಿದ್ದಾರೆ ಎನ್ನುವುದು ನಿಜ. ಅದೇ ರೀತಿ ಒ.ಎಸ್.46/2010 ರಲ್ಲಿ ಈ ಕೇಸಿನ ಎಲ್ಲಾ ಎದುರುದಾರರು ಪಾರ್ಟಿಯಾಗಿರುತ್ತಾರೆ ಅಂದರೆ ಕೆಲವರು ಆಗಿದ್ದಾರೆ. ಇನ್ನೂ ಕೆಲವರು ಪಾರ್ಟಿ ಆಗಿರುವುದಿಲ್ಲ.

6. ಒ.ಎಸ್.46/2010 ರಲ್ಲಿ ರಾಜಿ ಮಾಡಿಕೊಂಡ ಪ್ರಕಾರ ಎದುರುದಾರ 7 ಬಿ.ಬಿ.ರಾಜು ಇವರು ಸರ್ವೆ ನಂ.131/2 ರಲ್ಲಿ ಪರಿಹಾರ ಹಣ ಪಡೆಯಬಹುದು ಅಂತ ಪತ್ರ ಬರೆದಿದ್ದಾರೆ ಮತ್ತು ಒಕ್ಕಣಿಕೆ ಮಾಡಿದ್ದಾರೆ ಎನ್ನುವುದು ನಿಜ. ಆ ರಾಜಿ ಪ್ರಕಾರ ಎದುರುದಾರ 7 ಬಿ.ಬಿ.ರಾಜು ಇವರಿಗೆ ಎಷ್ಟು ಮೊತ್ತದ ಪರಿಹಾರ ಹಣ ಬಂತು ಅಂತ ಹೇಳಲು ಬರುವುದಿಲ್ಲ. ನನಗೆ ಎದುರುದಾರ 7 ಬಿ.ಬಿ.ರಾಜು ಕುಟುಂಬದವರು ಸರ್ವೆ ನಂ.131/2 ಗೆ ಸಂಬಂಧಪಟ್ಟ ಹಾಗೆ ರೂ.6,00,000/- ಕೊಟ್ಟಿದ್ದಾರೆ. ಒ.ಎಸ್.46/2010 ರಲ್ಲಿ ಆದಂತ ರಾಜಿ ವಿಚಾರ ಈ ಕೇಸಿಗೂ ಕೂಡ ಅನ್ವಯ ಆಗುತ್ತದೆ. ಒ.ಎಸ್.46/2010 ರಲ್ಲಿ ಕೂಡ ನಾನು ಇತರೆ ಪ್ರತಿವಾದಿಯರ ಜೊತೆ ರಾಜಿ ಮಾಡಿಕೊಂಡಿದ್ದೇನೆ. ನಾನು

ಹೇಳುವ ಹಾಗೆ 1ನೇ ಸಿವಿಲ್ ನ್ಯಾಯಾಲಯ ಹಿರಿಯ ವಿಭಾಗ ಮಂಡ್ಯ ಇವರಲ್ಲಿ ಇರುವ ಒ.ಎಸ್.46/2010 ರಲ್ಲಿ ರಾಜಿ ಮಾಡಿಕೊಂಡಿಲ್ಲ ಎನ್ನುವುದು ಸುಳ್ಳು.

7. ಸರ್ವೆ ನಂ.131/1, 131/2, 131/9 ಇವುಗಳ ಮಾಲೀಕರು ಯಾರು ಅಂತ ಎಸ್.ಎಲ್.ಎ.ಒ ಮಾಡಿದ ಗೆಜೆಟ್ ನಲ್ಲಿ ಬರೆದಿದ್ದಾರೆ ಅನ್ನುವುದು ನಿಜ. ಅರ್ಜಿದಾರ ಎಸ್.ಎಲ್.ಎ.ಒ ಇವರು ಭೂಮಿ ಸ್ವಾಧೀನ ಪಡಿಸಿಕೂಂಡ ಬಗ್ಗೆ ಸರ್ವೆ ನಂ.131 ರಲ್ಲಿಯ 13 ಪೋಡುಗಳ ಪೈಕಿ 3 ಪೋಡು ಜಮೀನುಗಳಲ್ಲಿ ಮಾತ್ರ ಸ್ವಾಧೀನ ಪಡಿಸಿಕೊಂಡಿದ್ದಾರೆ ಎನ್ನುವುದು ನಿಜ. ಮುಖ್ಯ ವಿಚಾರಣೆಯಲ್ಲಿ ಸರ್ವೆ ನಂ.131 ರಲ್ಲಿ ಪೋಡುಗಳ ಬಗ್ಗೆ ಸ್ಪಷ್ಟತೆ ಇಲ್ಲ ಅಂತ ನಾನು ಬರೆಸಿದ್ದೇನೆ. ಎಲ್ಲಾ ಪೋಡುಗಳ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಸರ್ವೆ ನಂ.131/8 ಅದು ನಮ್ಮ ತಾಯಿ ರತ್ನಮ್ಮ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ. 131/8 ಜಮೀನು ಪೋಡು ಸ್ಪಷ್ಟತೆ ಇರುವುದಿಲ್ಲ ಅಂತ ನಾನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳ ಮುಂದೆ ಅಪೀಲು ಅಥವಾ ರಿವಿಷನ್ ಹಾಕಿರುವುದಿಲ್ಲ. ನಮ್ಮ ತಾಯಿ ರತ್ನಮ್ಮ ಇವರ ತಂದೆ ಹೆಸರು ತಮ್ಮೇಗೌಡ. ತಮ್ಮೇಗೌಡನ ತಂದೆಯ ಹೆಸರು ಎ.ಚೌಡಯ್ಯ. ತಮ್ಮಯ್ಯ @ ತಮ್ಮೇಗೌಡ ಇವರ ಹೆಸರಿನಲ್ಲಿ ಯಾವತ್ತಾದರೂ ಸರ್ವೆ ನಂ.131 ರ ಪೋಡು ಜಮೀನು ಖಾತೆ ಪಹಣಿ ಇರಲಿಲ್ಲ. ತಮ್ಮಯ್ಯ @ ತಮ್ಮೇಗೌಡ ಇವರ ಹೆಸರಿಗೆ ಚೌಡಯ್ಯ ಪಾಲು ವಿಭಾಗ ಮಾಡುವ ಕಾಲಕ್ಕೆ ಸರ್ವೆ ನಂ.131/9, 131/2 ಜಮೀನನ್ನು ಕೊಟಿದ್ದರು. ಸದರಿ ಜಮೀನನ್ನು ತಮ್ಮಯ್ಯ @ ತಮ್ಮೇಗೌಡನಿಗೆ ಪಾಲು ವಿಭಾಗದಲ್ಲಿ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಯಾವುದಾದರೂ ನೋಂದಾದ ದಾಖಲೆ ಇದ್ದವೋ ಹೇಗೋ ನನಗೆ ಗೊತ್ತಿಲ್ಲ. ಎ.ಚೌಡಯ್ಯ ಇವರು ತಮ್ಮಯ್ಯ @ ತಮ್ಮೇಗೌಡನಿಗೆ 2 ಜಮೀನನ್ನು 1963 ರಲ್ಲಿ ಕೊಟ್ಟಿರುತ್ತಾರೆ. ನಾನು 1974 ರಲ್ಲಿ ಹುಟ್ಟಿರುತ್ತೇನೆ. ಒ.ಎಸ್.46/2010 ದಾಖಲು ಮಾಡುವ ಕಾಲಕ್ಕೆ ತಮ್ಮಯ್ಯ @ ತಮ್ಮೇಗೌಡ ನಿಗೆ ಜಮೀನು ಕೊಟ್ಟ ಬಗ್ಗೆ ನನಗೆ ಗೊತ್ತಾಯಿತು.

8. ತಮ್ಮಯ್ಯ @ ತಮ್ಮೇಗೌಡ ಇವರು 1961 - 62 ರಲ್ಲಿ ಮೃತ ಪಟ್ಟಿರುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಸರ್ವೇ ನಂ.131 ಕ್ಷೇತ್ರ 22 ಎಕರೆ 4 ಗುಂಟೆ ಇದು ನಮ್ಮ ತಾತ ಎ.ಚೌಡಯ್ಯ ಇವರ ಮುಖಾಂತರ ಬಂದಿರುತ್ತದೆ ಅಂದರೆ ಪಿತ್ರಾರ್ಜಿತ ಆಸ್ತಿ ಅಂತ ಹೇಳಿದ್ದೇವೆ. ಎ.ಚೌಡಯ್ಯನವರಿಗೂ ಕೂಡ ಇದು ಪಿತ್ರಾರ್ಜಿತ ಆಸಿತ ಆಗಿರುತ್ತದೆ ಅಂದರೆ ಚೌಡಯ್ಯನಿಕ್ಕಿಂತ ಪೂರ್ವದಲ್ಲಿ ಅವರ ಹಿರಿಯರಿಂದ ಬಂದಿರುತ್ತದೆ. ಎ.ಚೌಡಯ್ಯನಿಕ್ಕಂತ ಪೂರ್ವದಲ್ಲಿ ಪಿತ್ರಾರ್ಜಿತ ಆಸ್ತಿ ಅಂತ ತೋರಿಸಲು ಆರ್.ಆರ್ ಇಂಡಕ್ಸ್ ಹಾಜರು ಮಾಡಿರುತ್ತೇನೆ. ಸರ್ವೆ ನಂ.131 ಇದರ ಮೂಲ ಕರ್ತ ಅಂದರೆ ಪಿತೃ ಯಾರು ಅಂತ ಹೇಳಲು ಬರುವುದಿಲ್ಲ. ಮೂಲ ಪುರುಷ ಕೆಂಪೇಗೌಡ ಇವರ ಹೆಸರಿನಲ್ಲಿ ಜಮೀನು ದಾಖಲೆ ನಾನು ನೋಡಿರುವುದಿಲ್ಲ. ಕಂದಾಯ ಅಧಿಕಾರಿಗಳು ಕೊಟ್ಟಂತ ಆರ್.ಆರ್ ಮತ್ತು ಇಂಡಕ್ಸ್ ದಾಖಲೆ ನೋಡಿ ಅದು ಎ.ಚೌಡಯ್ಯನಿಕ್ಕಂತ ಮೊದಲಿನಿಂದಲೂ ಪಿತ್ರಾರ್ಜಿತ ಆಸ್ತಿ ಅಂತ ಹೇಳುತ್ತಿದ್ದೇನೆ. ಚೌಡ ಬಿನ್ ಚೌಡೇಗೌಡ ಪಿತ್ರಾರ್ಜಿತ ಅಂತ ನಿಡಿ.46 ರಲ್ಲಿ ಬರೆಯಲಾಗಿದೆ ಎನ್ನುವುದು ನಿಜ. ನಿಡಿ.46 ಆರ್.ಆರ್. ದಾಖಲೆ ನೋಡುತ್ತಿದ್ದೇನೆ. ಅದರಲ್ಲಿ ಎ.ಚೌಡಯ್ಯ ಅಂತ ಹೆಸರಿರುವ ವ್ಯಕ್ತಿ ನಮ್ಮ ಮುತ್ತಾತ. ನಿಡಿ.46 ದಾಖಲೆಯಲ್ಲಿ ಬರೆದಿರುವ ಚೌಡ್ ಬಿನ್ ಚೌಡೇಗೌಡ ಇವರು ಎ.ಚೌಡಯ್ಯನಿಗೆ ಸಂಬಂಧ ಇರುವುದಿಲ್ಲ ಎನ್ನುವುದು

ಸುಳ್ಳು. ಆ 2 ಹೆಸರಿನ ವ್ಯಕ್ತಿ ಒಬ್ಬರೇ . ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ಕ್ಷೇತ್ರ 22 ಎಕರೆ 4 ಗುಂಟೆ ಇದು ಎ.ಚೌಡಯ್ಯ ಇವರ ಸ್ವಯಾರ್ಜಿತ ಆಸ್ತಿ ಆಗಿತ್ತು ಎನ್ನುವುದು ಸುಳ್ಳು.

9. ಎ.ಚೌಡಯ್ಯ ಇವರು ಉಮ್ಮಡಹಳ್ಳಿಯಲ್ಲಿ ಪೋಸ್ಟ್ ಮ್ಯಾನ್ ಆಗಿದ್ದ ಅನ್ನುವುದು ನನಗೆ ಗೊತ್ತಿಲ್ಲ. ಎ.ಚೌಡಯ್ಯ ಇವರು ಸರ್ವೆ ನಂ.131 ಕ್ಕೆ ಮಾಲೀಕರಾಗಿ ಬೇರೆಯವರಿಗೆ ಬರೆದುಕೊಟ್ಟಿದ್ದಾರೆ ಅಂದರೆ ಇರಬಹುದು. ಆದರೆ ಅದು ಎ.ಚೌಡಯ್ಯ ಇವರ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಎ.ಚೌಡಯ್ಯ ಇವರು ಯಾವ ವರ್ಷದಲ್ಲಿ ಮಕ್ಕಳಿಗೆ ಪಾಲು ವಿಭಾಗ ಮಾಡಿಕೊಟ್ಟಿದಾರೆ ಅಂತ ಹೇಳಲು ಬರುವುದಿಲ್ಲ. ಎ.ಚೌಡಯ್ಯ ಇವರು ಪಾಲು ವಿಭಾಗ ಮಾಡಿದ ಬಗ್ಗೆ ದಾಖಲೆ ಬರವಣಿಗೆ ಮಾಡಿರುವುದಿಲ್ಲ, ನೋಂದು ಮಾಡಿರುವುದಿಲ್ಲ. ಎ.ಚೌಡಯ್ಯ ಇವರು ಸರ್ವೆ ನಂ.131 ರಲ್ಲಿರುವ 13 ಪೋಡು ಜಮೀನಿಗೆ ಸಂಬಂಧಪಟ್ಟ ಹಾಗೆ ಕ್ರಯ ಪತ್ರ ನೋಡಿರುವುದಿಲ್ಲ. ಎ.ಚೌಡಯ್ಯನ ಮಗ ತಮ್ಮಯ್ಯ. ಸದರಿ ತಮ್ಮಯ್ಯನ ಮಗ ಎದುರುದಾರ 10 ಪಶುಪತಿ ಆಗಿರುತ್ತಾರೆ. ಎದುರುದಾರ 10 ಪಶುಪತಿ ಇವರು ನನಗೆ ಮಾವ ಆಗುತ್ತಾರೆ. ಅಂದರೆ ಅಣ್ಣ ತಮ್ಮಂದಿರ ಸಂಬಂಧ ಇರುವುದಿಲ್ಲ. ಎ.ಚೌಡಯ್ಯ ಇವರು ಬರೆದುಕೊಟ್ಟಂತ ಕೆಲವು ದಾಖಲೆ ಈ ಕೇಸಲಿ ಹಾಜರು ಮಾಡಲಾಗಿದೆ ಅನ್ನುವುದು ನನಗೆ ಗೊತ್ತಿಲ್ಲ. ಅಂತ ದಾಖಲೆ ನಾನು ನೋಡಿಲ್ಲ. ಎದುರುದಾರ 10 ಪಶುಪತಿ ಇವರು ಕೆಲವು ಜಮೀನು ಮಾರಾಟ ಮಾಡಿದ್ದಾರೆ. ಅಂದರೆ ಸ್ವಲ್ಪ ಜಮೀನು ಸರ್ವೆ ನಂ. 149, 128 ರಲ್ಲಿ ಉಳಿಸಿಕೊಂಡಿದ್ದಾರೆ. ಎದುರುದಾರ 10 ಪಶುಪತಿ ಇವರಿಗೆ ಪಾಲು ವಿಭಾಗದ ಮುಖಾಂತರ ತಮ್ಮಯ್ಯನಿಂದ ಬಂದಿರುತ್ತದೆ. ತಮ್ಮಯ್ಯ ಇವರಿಂದ ಎದುರುದಾರ 10 ಪಶುಪತಿ ಇವರಿಗೆ ಪಾಲು ವಿಬಾಗದ ಮುಖಾಂತರ ಬಂತು ಅಂತ ತೋರಿಸುವ ದಾಖಲೆ ನಾನು ನೋಡಿರುವುದಿಲ್ಲ. ಅದೇ ರೀತಿ ಅಂತ ದಾಖಲೆ ಹಾಜರು ಮಾಡಿರುವುದಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೇ ನಂ.131 ಜಮೀನನ್ನು ಎ.ಚೌಡಯ್ಯ ಮಾರುವ ಕಾಲಕ್ಕೆ ಪೋಡು ಆಗಿರಲಿಲ್ಲ. ನಿಡಿ. 45 ನಕಾಶೆ ನೋಡುತ್ತಿದ್ದೇನೆ. ಅದನ್ನು 1990 ರಲ್ಲಿ ತಯಾರು ಮಾಡಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ಎ.ಚೌಡಯ್ಯ ಇವರ ಮಕ್ಕಳು ಜಮೀನಿನಲ್ಲಿ ಯಾವ ಯಾವ ಭಾಗದಲ್ಲಿ ಸ್ವಾಧೀನದಲ್ಲಿ ಇದ್ದಾರೆ ಅಂತ ತೋರಿಸಲು ನಿಡಿ.45 ನಕಾಶೆ, ನಿಡಿ.21 ನಕಾಶೆ 1990 ರಲ್ಲಿ ಮಾಡಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ನಿಡಿ.21 ನಕಾಶೆ, ನಿಡಿ.45 ನಕಾಶೆ ಇವುಗಳನ್ನು ನಾನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನೆ ಮಾಡಿ ಅಪೀಲು ಅಥವಾ ರಿವಿಷನ್ ಹಾಕಿರುವುದಿಲ್ಲ.

10. ನಿಡಿ.21 ಸರ್ವೆ ನಕಾಶೆ ನೋಡುತ್ತಿದ್ದೇನೆ. ಅದರಲ್ಲಿ ಸರ್ವೆ ನಂ.131/8 ಕ್ಷೇತ್ರ 14 ಗುಂಟೆ ಇದು ನಮ್ಮ ತಾಯಿ ರತ್ನಮ್ಮ ಇವರ ಸ್ವಾಧೀನ ತೋರಿಸುತ್ತದೆ ಎನ್ನುವುದು ನಿಜ. ಸದರಿ ಸರ್ವೆ ನಂ.131/8 ಇದರ ಪಹಣಿ ರತ್ನಮ್ಮನ ಹೆಸರಿನಲ್ಲಿ ತೋರಿಸುತ್ತದೆ ಎನ್ನುವುದು ನಿಜ. ಸರ್ವೆ ನಂ.131 ರಲ್ಲಿ ಒಟ್ಟು 14 ಪೋಡು ಆರ್.ಟಿ.ಸಿ ಯಲ್ಲಿ ಬರುತ್ತವೆ ಎನ್ನುವುದು ನಿಜ. ಸದರಿ 14 ಪೋಡುಗಳ ಜಮೀನು ಪಹಣಿಗಳನ್ನು ನಿಡಿ.62 ರಿಂದ 75 ಅಂತ ಗುರುತಿಸಲಾಯಿತು. ನಿಡಿ.21, ನಿಡಿ.45 ನಕಾಶೆಯಲ್ಲಿ ಇರುವ ಎಂಟ್ರಿ ಪ್ರಕಾರ 1990 ರ ನಂತರ ಕಂದಾಯ ದಾಖಲೆಗಳಲ್ಲಿ ಇದೆ ರೀತಿ ಎಂಟ್ರಿ ಮುಂದುವರೆದಿದೆ ಅನ್ನುವುದು ನನಗೆ ಗೊತ್ತಿಲ್ಲ. ನಿಡಿ.62 ರಿಂದ 75 ರಲ್ಲಿರುವ ಪಹಣಿ ಎಂಟ್ರಿ ತಪ್ಪಾಗಿದೆ ಅಂತ ನಾವು ಕಂದಾಯ ಅಧಿಕಾಗಳ ಮುಂದೆ, ಜಿಲ್ಲಾಧಿಕಾರಿ ಮುಂದೆ ಅಪೀಲು ರಿವಿಷನ್ ಹಾಕಿರುವುದಿಲ್ಲ. ಒ.ಎಸ್. 46/2010 ರಲ್ಲಿ 12 ಪೋಡು

ಜಮೀನು ಇರುವುದಿಲ್ಲ. ಆದರೆ ಸರ್ವೆ ನಂ.131/2, 131/9 ಮಾತ್ರ ಷೆಡ್ಯೂಲ್ ಆಸ್ತಿಯಾಗಿರುತ್ತವೆ. ಒ.ಎಸ್.46/2010 ರಲ್ಲಿ 5 ಜಮೀನು ಷೆಡ್ಯೂಲ್ ಮಾಡಿದ್ದಾರೆ ಎನ್ನುವುದು ನಿಜ. ಒ.ಎಸ್.46/2010 ಕೇಸು ದಾಖಲು ಮಾಡುವ ಕಾಲಕ್ಕೆ ಸರ್ವೆ ನಂ.131 ಇದರ ಜಮೀನು ಪಹಣಿಯಲ್ಲಿ ಪೈಕಿ ಅಂತ ಇರಲಿಲ್ಲ ಎನ್ನುವುದು ನಿಜ. ಮೊದಲು ಪೈಕಿ ಅಂತ ಇತ್ತು. ಒ.ಎಸ್.46/2010 ರಲ್ಲಿ ತೋರಿಸಿದ 5 ಜಮೀನುಗಳ ಜಾಗ ತೋರಿಸುವ ಚೆಕ್ ಬಂದಿ ಸರಿಯಾಗಿ ಇರಲಿಲ್ಲ ಎನ್ನುವುದು ಸುಳ್ಳು. ಅದರಲ್ಲಿ ನಮೂದು ಮಾಡಿದ 5 ಜಮೀನುಗಳ ಚೆಕ್ ಬಂದಿ ಮತ್ತು ಪೋಡು ಸರಿಯಾಗಿರುವುದಿಲ್ಲ ಅನ್ನುವುದು ಸುಳ್ಳು. ಸರ್ವೆ ನಂ.131/1 , 131/2, 131/9 ಇವು ಒ.ಎಸ್.46/2010 ರಲ್ಲಿ ಷೆಡ್ಯೂಲ್ ಆಸ್ತಿಯಾಗಿರುವುದಿಲ್ಲ ಎನ್ನುವುದು ಸುಳ್ಳು.

11. ಒ.ಎಸ್.46/2010 ಕೇಸಲ್ಲಿ ಎದುರುದಾರ 6 ಮಾರ್ಗರೇಟ್ , 7 ಬಿ.ಬಿ.ರಾಜು , 8.ರೂಪ ವಿಲ್ಸನ್ , 9.ಲಕ್ಷ್ಮಿ ಪ್ರಸಾದ್ ಇವರುಗಳು ಪ್ರತಿವಾದಿ ಆಗಿದ್ದಾರೆ ಎನ್ನುವುದು ನಿಜ. ಎದುರುದಾರ 6, 7, 8, 9 ಇವರ ಹೆಸರಿನಲ್ಲಿ ಸರ್ವೆ ನಂ.131 ರಲ್ಲಿ ಪ್ರತ್ಯೇಕ ಖಾತೆಯಾಗಿರುತ್ತವೆ ಎನ್ನುವುದು ನಿಜ. ಅವು ಸುಳ್ಳು ದಾಖಲೆ. ಎದುರುದಾರ 6 ಮಾರ್ಗರೇಟ್, 7.ಬಿ.ಬಿ.ರಾಜು ಅವರಿಗೆ ಬಂದಿರುವ ಜಮೀನಿನಲ್ಲಿ ಕಟ್ಟಡ ಇರುತ್ತವೆ ಅನ್ನುವುದು ನನಗೆ ಗೊತ್ತಿಲ್ಲ. ನಾನು ಹುಟ್ಟಿದಾಗಿನಿಂದ ಉಮ್ಮಡಹಳ್ಳಿಯಲಿ ವಾಸ ಮಾಡುತ್ತಾ ಬಂದಿರುತ್ತೇನೆ. ಸರ್ವೆ ನಂ.131 ಇದು ಉಮ್ಮಡಹಳ್ಳಿಯಿಂದ ಒಂದುವರೆ ಕಿ.ಮಿ ದೂರದಲ್ಲಿ ಇದೆ. ನಾನು ಇತ್ತೀಚೆಗೆ 2 ವರ್ಷದ ಹಿಂದೆ ಸರ್ವೆ ನಂ.131 ಕ್ಕೆ ಹೋಗಿ ಬಂದಿರುತ್ತೇನೆ. 2 ವರ್ಷದ ನಂತರ ಈಚೆಗೆ ನಾನು ಜಮೀನು ಹತ್ತಿರ ಹೋಗಿರುವುದಿಲ್ಲ. ಸರ್ವೆ ನಂ.131/8 ನಮ್ಮ ತಾಯಿ ರತ್ನಮ್ಮ ಹೆಸರಿನಲ್ಲಿ ಇದೆ. ಅದು ಈಗಲೂ ಖಾಲಿ ಜಮೀನು ಇದೆ, ಅಲ್ಲಿ ಬೆಳೆ ಹಾಕಿರುವುದಿಲ್ಲ.

**ಎ.ಇಮಾನ್ಯೂಯಲ್ ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

**ದಿನಾಂಕ 23.11.2021 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ಶ್ರೀ ಎ.ಇಮಾನ್ಯೂಯಲ್ ವಕೀಲರಿಂದ ಎದುರುದಾರ 6, 8, 9, 10 ರವರ ಪರವಾಗಿಃ**

12. ಒ.ಎಸ್.46/2010 ರಲ್ಲಿ ಸರ್ವೆ ನಂ.131 ರಲ್ಲಿ ಎಷ್ಟು ಪೋಡು ಇವೆ ಅಂತ ಕಾಣಿಸಿರುವುದಿಲ್ಲ. ಅದೇ ರೀತಿ ಒ.ಎಸ್.46/2010 ರಲ್ಲಿ ಜಮೀನು ಪೋಡುಗಳನ್ನು ನಾವು ತೋರಿಸಿರುವುದಿಲ್ಲ. ಏಕೆಂದರೆ ಪೈಕಿ ಅಂತ ಇತ್ತು ಅದನ್ನೇ ತೋರಿಸಿದ್ದೇವೆ. ಸರ್ವೆ ನಂ.131 ಇದರಲ್ಲಿ ಪೋಡು ಮತ್ತು ಹಿಸ್ಸಾ 1990 ರಲ್ಲಿ ಆಗಿರತ್ತದೆ ಎಂದರೆ ಇರಬಹುದು. 1990 ರ ನಂತರ ಪಹಣಿಯಲ್ಲಿ ಸರ್ವೆ ನಂ.131 ಪೈಕಿ ಅಂತ ಬರಣಿಗೆ ಇರಲಿಲ್ಲ ಎನ್ನುವುದು ಸುಳ್ಳು. ಸಾಕ್ಷಿ ಹೇಳುತ್ತಾನೆ 1990 ರ ನಂತರ ಕೂಡ ಪೈಕಿ ಅಂತ ಪಹಣಿಯಲ್ಲಿ ಬರೆದಿದ್ದರು. 1990 ರ ನಂತರ ಸರ್ವೆ ನಂ. ಪಕ್ಕ ಪೈಕಿ ಅಂತ ಬರೆದ ಆರ್.ಟಿ.ಸಿ ಮಾನ್ಯತೆ ಇರುವುದಿಲ್ಲ ಅನ್ನುವುದು ನನಗೆ ಗೊತ್ತಿಲ್ಲ. ಒ.ಎಸ್.46/2010 ರಲ್ಲಿ ಕೇಸು ದಾಖಲು ಮಾಡುವ ಕಾಲಕ್ಕೆ ನಾನು ಪಹಣಿ ನೋಡಿದ್ದೆನು. ಅದರ ನಂತರ ನಾನು ಪಹಣಿ ನೋಡಿಲ್ಲ ಹೀಗಾಗಿ ಪೈಕಿ ಅಂತ ಬರೆದ ಪಹಣಿಗೆ ಮಾನ್ಯತೆ ಇರುವುದಿಲ್ಲ ಅನ್ನುವುದು ನನಗೆ ಗೊತ್ತಿಲ್ಲ. ನಾನು ಕಳೆದ 4-5 ವರ್ಷದಿಂದ ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ರ ಪಹಣಿ ನೋಡಿರುವುದಿಲ್ಲ. ನಿಡಿ.45 ನಕಾಶೆ ನೋಡುತ್ತಿದ್ದೇನೆ. ಅರದಲ್ಲಿ ಸರ್ವೆ ನಂ.131 ಪೈಕಿ ಅಂತ ಬರೆದಿಲ್ಲ ಎನ್ನುವುದು ನಿಜ. ಪೋಡಿ ನಂಬರ್ ಕೊಡಲಾಗಿದೆ. ಒ.ಎಸ್.46/2010 ಕೇಸು ದಾಖಲು ಮಾಡುವ ಕಾಲಕ್ಕೆ ಸರ್ವೆ ನಂ.131 ರ ಪಹಣಿಯಲ್ಲಿ ಪೋಡಿ ಮಾಡಲಾಗಿತ್ತು, ಪೈಕಿ ಇರಲಿಲ್ಲ ಎನ್ನುವುದು ಸುಳ್ಳು. ಸರ್ವೆ ನಂ.131 ರಲ್ಲಿ ಯಾವ ವರ್ಷದಲ್ಲಿ ಪೈಕಿ ಎನ್ನುವುದು ಹೋಯಿತು ಅನ್ನುವುದು ನನಗೆ ಗೊತ್ತಿಲ್ಲ. ಒ.ಎಸ್.46/2010 ರಲ್ಲಿ ಎದುರುದಾರ 5, 6, 7, 8, 10 ಇವರ ಹಕ್ಕುಗಳ ಬಗ್ಗೆ ಹೇಳಿರುವುದಿಲ್ಲ. ಎದುರುದಾರ 10 ಪಶುಪತಿ ಇವರು ಸರ್ವೆ ನಂ.131 ರಲ್ಲಿ ಮಾರಾಟ ಮಾಡಿ ಬರೆದುಕೊಟ್ಟಂತ ಕ್ರಯಪತ್ರಗಳನ್ನು ಪ್ರಶ್ನೆ ಮಾಡಿ ನಾವು ಸಿವಿಲ್ ಕೇಸು ಹಾಕಿರುವುದಿಲ್ಲ. ನಮ್ಮ ಮುತ್ತಾತ ಎ.ಚೌಡಯ್ಯ ಇವರು ಎದುರುದಾರ 10 ಪಶುಪತಿಗೆ ಇವರಿಗೆ ಬರೆದುಕೊಟ್ಟಂತ ನಿಡಿ.10, 11, 12 ದಾಖಲೆಗಳನ್ನು ಅಂದರೆ ಸೆಟಲ್‌ಮೆಂಟ್ ಡೀಡ್ ಮತ್ತು ಮರಣ ಶಾಸನ ನಾವು ನ್ಯಾಯಾಲಯದಲ್ಲಿ ಪಶ್ನೆ ಮಾಡಿರುವುದಿಲ್ಲ.

13. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ131 ಇದು ಮೂಲತಃ ನಮ್ಮ ಮುತ್ತಾತ ಎ.ಚೌಡಯ್ಯ ಹೆಸರಿಗೆ ಇತ್ತು. ಸದರಿ ಜಮೀನು ಎ.ಚೌಡಯ್ಯ ಇವರಿಗೆ ಯಾವ ದಾಖಲೆ ಮುಖಾಂತರ ಬಂತು ಅನ್ನುವುದು ನನಗೆ ಗೊತ್ತಿಲ್ಲ. ನಿಡಿ.46 ಮ್ಯೂಟೇಷನ್ ನೋಡುತ್ತಿದ್ದೇನೆ. ಅದರಲ್ಲಿ 1968 -69, 1945- 46, 1963-64 ರಲ್ಲಿ ಆಸ್ತಿ ಬೇರೆಯವರಿಗೆ ಬರೆದುಕೊಟ್ಟ ಬಗ್ಗೆ ಅದರಲ್ಲಿ ಬರವಣಿಗೆ ಇದೆ ಅನ್ನುವುದು ನಿಜ. ನಿಡಿ.46 ಮ್ಯೂಟೇಷನ್ ನಲ್ಲಿ ಬರೆದಂತ ಕೆ.ಆರ್.ಗೌಡ ಬಿನ್ ಚಿಕ್ಕಪುಟ್ಟೇಗೌಡ ನಮ್ಮ ಸಂಬಧಿಕರೆ. ಅವನ ಕ್ರಯ ಪತ್ರ 1934 ರಲ್ಲಿ ಆಗಿರುತ್ತದೆ. ಅದನ್ನು ಪ್ರಶ್ನೆ ಮಾಡಿರುವುದಿಲ್ಲ. ಅದೇ ರೀತಿ ಚೌಡಯ್ಯ ಬಿನ್ ಕೆಂಪೇಗೌಡ ಇವರಿಗೆ ಒಂದು ಸೈಟು 1968- 69 ರಲ್ಲಿ ಆಗಿದೆ. ಅದನ್ನು ಪ್ರಶ್ನೆ ಮಾಡಿಲ್ಲ. ನಿಡಿ.46 ಮ್ಯೂಟೇಷನ್ ದಾಖಲೆ

ನೋಡುತ್ತಿದ್ದೇನೆ. ಅದರಲ್ಲಿ ಹುಚ್ಚಹೆಗ್ಗಡೆ ಬಿನ್ ಹುಚ್ಚ ಹೆಗ್ಗಡೆ ಅನ್ನುವವರ ಹೆಸರು ಇದೆ. ಅವರು ನಮ್ಮ ಸಂಬಂಧಿಕರು ಆಗಿರುವುದಿಲ್ಲ. ಎ.ಚೌಡಯ್ಯ ಅನ್ನುವವರು ಮೂಲತಃ ಸರ್ವೆ ನಂ.131 ಇದನ್ನು ಬೇರೆ ಬೇರೆಯವರಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಅನ್ನುವುದು ಸುಳ್ಳು. ನಿಡಿ.47 ಕ್ರಯ ಪತ್ರ ದಿನಾಂಕ 18.08.1996 ಇದನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ಅದೇ ರೀತಿ ನಿಡಿ.48 ಕ್ರಯ ಪತ್ರ ದಿನಾಂಕ 18.08.1996 ಇದನ್ನು ನಾವು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ಒ.ಎಸ್.382/2015 ರಲ್ಲಿ ತೋರಿಸಿದ ಷೆಡ್ಯೂಲ್ ನಲ್ಲಿ ನಾವು ಪೈಕಿ ಅಂತ ತೋರಿಸಿದ್ದೇವೆ, ಪೋಡಿ ನಂಬರ್ ಕಾಣಿಸಿಲ್ಲ ಎನ್ನುವುದು ನಿಜ. ನಿಡಿ.45 ನಕಾಶೆ ನೋಡುತ್ತಿದ್ದೇನೆ. ಅದರಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ಪೂರ್ವ ಪಶ್ಚಿಮವಾಗಿ ತೋರಿಸಿದ್ದೇವೆ. ಒ.ಎಸ್.382/2015 ಕೇಸಲ್ಲಿ ಮರಕಾಡನದೊಡ್ಡಿಗೆ ಹೋಗುವ ರಸ್ತೆ ವಿಚಾರವಾಗಿ ದಾಖಲೆ ಮಾಡಿದ್ದೇವೆ ಎನ್ನುವುದು ನಿಜ. ಅದರಲ್ಲಿ ಕೂಡ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಸ್ವಲ್ಪ ಭಾಗದ ಜಮೀನು ಬರುತ್ತದೆ. ಒ.ಎಸ್.382/2015 ರಲ್ಲಿಯ ಷೆಡ್ಯೂಲ್‌ಗೂ ಈ ಕೇಸಿನ ಆಸ್ತಿಗೂ ಸಂಬಂಧ ಇಲ್ಲ ಎನ್ನುವುದು ಸುಳ್ಳು. ಅದೇ ರೀತಿ ಒ.ಎಸ್.382/2015 ರಲ್ಲಿಯ ಷೆಡ್ಯೂಲ್ ಗೂ ಈ ಕೇಸಿನ ಪರಿಹಾರಕ್ಕೂ ಸಂಬಂಧ ಇಲ್ಲ ಎನ್ನುವುದು ಸುಳ್ಳು.

14. ಒ.ಎಸ್.382/2015 ರ ಇದನ್ನು ಕೇವಲ injunction ದಾವೆ ಮಾಡಿದ್ದಾರೆ ಎನ್ನುವುದು ನಿಜ. ಒ.ಎಸ್.382/2015 ರಲ್ಲರುವ ಸರ್ವೆ ನಂ.131 ಪೈಕಿ ಜಮೀನು ಪರಹಾರ ಹಣ ರೂ.1,80,00,000/- ಹಣ ನಮಗೆ ಬರಬೇಕು ಅಂತ ಎಸ್.ಎಲ್.ಎ.ಒ ಕಚೇರಿಯಲ್ಲಿ ಅರ್ಜಿ ಕೊಟ್ಟಿದ್ದೇವೆ. ಆ ತಕರಾರು ಅರ್ಜಿಯನ್ನು ನಿಡಿ.76 ಅಂತ ಗುರುತಿಸಲಾಯಿತು. ಆರ್.ಟಿ.ಸಿ ಪ್ರಕಾರ ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/1 ಕ್ಷೇತ್ರ 6 ಎಕರೆ 11 ಗುಂಟೆ ಇದು ಸರ್ಕಾರಿ ಆಸ್ತಿಯಾಗಿರುತ್ತದೆ ಎನ್ನುವುದು ಸುಳ್ಳು. ಸರ್ವೆ ನಂ.131/1 ಕ್ಷೇತ್ರ 6 ಎಕರೆ 11 ಗುಂಟೆ ಇದು ಸರ್ಕಾರಕ್ಕೆ ಸ್ವಾಧೀನ ಪಡಿಸಿಕೊಂಡ ಬಗ್ಗೆ ಕಂದಾಯ ದಾಖಲೆಗಳಲ್ಲಿ ಬರವಣಿಗೆ ಇದೆ ಎನ್ನುವುದು ನಿಜ. ಅದರಲ್ಲಿ ಮರಕಾಡನದೊಡ್ಡಿ ರಸ್ತೆಗೆ ಇನ್ನೂ ಬೇರೆ ಜಮೀನು ಹೋಗಿರುತ್ತದೆ . ಆದರೆ ಕ್ಷೇತ್ರ ನನಗೆ ಗೊತ್ತಿಲ್ಲ. ಅಂದರೆ 6 ಎಕರೆ 11 ಗುಂಟೆ ಬಿಟ್ಟು ಸರ್ವೆ ನಂ. 131/1 ರಲ್ಲಿ ಬೇರೆ ಜಮೀನು ರಸ್ತೆಗೆ ಹೋಗಿದೆ. ಮೈಸೂರು - ಬೆಂಗಳೂರು ರಸ್ತೆಗೆ ಸರ್ವೆ ನಂ.131 ರಲ್ಲಿ ಯಾವ ಯಾವ ಪೋಡಿನಲ್ಲಿ ಎಷ್ಟು ಕ್ಷೇತ್ರ ಹೋಗಿದೆ ಅಂತ ಎಸ್.ಎಲ್.ಎ.ಒ ಇವರು ನಕಾಶೆ ಮಾಡಿದ್ದಾರೆ. ಅದನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ.77 ಅಂತ ಗುರುತಿಸಲಾಯಿತು. ಸರ್ವೆ ನಂ. 131/1 ರ ಉತ್ತರಕ್ಕೆ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಶಾಲೆ ಕಟ್ಟಡ ಇತ್ತು. ಅದನ್ನು ಇತ್ತೀಚೆಗೆ NH 275 ಅಧಿಕಾರಿಗಳು ಹೊಡೆದು ಹಾಕಿದ್ದಾರೆ. ಕಟ್ಟಡ ಇದ್ದಂತ ಜಾಗವನ್ನು ನಿಡಿ.77(ಎ) ಅಂತ ಗುರುತಿಸಲಾಯಿತು. ನಿಡಿ.77 ದಾಖಲೆಯಲ್ಲಿ ಸರ್ವೆ ನಂ.131/1 ಇದರ ಮಾಲೀಕರ ಹೆಸರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಇತರೆ ಮಾಲೀಕರು ಅಂತ ಬರೆದಿದ್ದಾರೆ. ಸಾಕ್ಷಿ ಹೇಳುತ್ತಾನೆ ಅದನ್ನು ತಪ್ಪಾಗಿ ಬರೆದಿದ್ದಾರೆ . ಸರ್ವೆ ನಂ.131/1 ರಲ್ಲಿ ಇರುವಂತ ಶಾಲೆಯ ಜಾಗ ನಮ್ಮ ಮಾಲೀಕೆಗೆ ಸೇರಿದ್ದು ಅಂತ ನಾವು ಮಂಡ್ಯ ನ್ಯಾಯಾಲಯದಲ್ಲಿ ದಾವೆ ಹಾಕಿರುವುದಿಲ್ಲ. ಆದರೆ ಒ.ಎಸ್.382/2015 ಕೇಸನ್ನು injunction ಗೆ ಹಾಕಿದ್ದೇವೆ. ಅಷ್ಟು ಬಿಟ್ಟರೆ ಶಾಲೆ ಜಾಗದ ಆಸ್ತಿ ಸಂಬಂಧ ಬೇರೆ ಕೇಸು ಹಾಕಿರುವುದಿಲ್ಲ.

ಶಾಲೆಗೆ ಸಂಬಂಧಪಟ್ಟ ಜಾಗ ಸ್ವಾಧೀನ ಪಡಿಸಿಕೊಂಡಿದ್ದರಿಂದ ಅರ್ಜಿದಾರ SLAO ಇವರು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಮೊದಲನೇ ಕಂತು ಅಂತ ರೂ.70,00,000/- ಪರಿಹಾರ ಕೊಟ್ಟಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. SLAO ಇವರಿಗೆ ನಾವು ಕೊಟ್ಟಂತ ನೋಟೀಸನಲ್ಲಿ ನಿರ್ದಿಷ್ಟವಾಗಿ ಶಾಲೆಗೆ ಸೇರಿದ ಜಾಗ ನಂದು ಅಂತ ಹೇಳಿಲ್ಲ. ಆದರೆ ಒಟ್ಟಾರೆ ಸರ್ವೆ ನಂ.131/1 ಈ ಜಮೀನು ನಮ್ಮದ್ದು ಅಂತ ನೋಟೀಸು ಕೊಟ್ಟಿದ್ದೇವೆ. ನಿಡಿ.76 ನೋಟೀಸನಲ್ಲಿ ನಿರ್ದಿಷ್ಟವಾಗಿ ಸರ್ವೆ ನಂ.131/1 ಇದರ ಬಗ್ಗೆ ಅಂತ ಷೆಡ್ಯೂಲ್ ನಲ್ಲಿ ಸರ್ವೆ ನಂಬರ್ ತೋರಿಸಿಲ್ಲ ಎನ್ನುವುದು ನಿಜ.

15. ಸರ್ವೆ ನಂ.131/1 ಶಾಲೆಗೆನ ಸೇರಿದ ಜಾಗದ ಪರಿಹಾರ ಹಣ ನನಗೆ ಸಂಬಧ ಇರುವುದಿಲ್ಲ ಎನ್ನುವುದು ಸುಳ್ಳು. ಸದರಿ ಹಣ ಈ ಕೋರ್ಟಿನ ವ್ಯಾಪ್ತಿಗೆ ಮೀರಿದ್ದು, ಆದರೂ ಕೂಡ ನಾನು ಮತ್ತು SLAO ಶಾಮೀಲಾಗಿ (ಶರೀಕಾಗಿ) ಅಕ್ರವಾಗಿ ರೂ.1,80,00,000/- ಹಣವನ್ನು ಇಲ್ಲಿ ತಂದು ಇಡಿಸಿದ್ದೇವೆ ಎನ್ನುವುದು ಸುಳ್ಳು. ಮಂಡ್ಯ ಶಿಕ್ಷಣ ಇಲಾಖೆ ಅಧಿಕಾರಿಗಳು ಈ ಕೇಸಲ್ಲಿ ಪಾರ್ಟಿ ಇಲ್ಲ ಎನ್ನುವುದು ನಿಜ. ನಾನು ಮತ್ತು SLAO ಶಾಮೀಲಾಗಿ ಈ ರೀತಿ ಹಣ ತರಿಸಿದ್ದೇವೆ ಎನ್ನುವುದು ಸುಳ್ಳು. ಈ ಕೇಸಲ್ಲಿ ಪರಿಹಾರ ಪಡೆಯಲು ಎದುರುದಾರ 6, 8, 9, 10 ಇವರಿಗೆ ಮಾತ್ರ ಹಕ್ಕು ಇರುತ್ತದೆ ಎನ್ನುವುದು ಸುಳ್ಳು. ನಮಗೆ ಸರ್ವೆ ನಂ.131 ರಲ್ಲಿ ಯಾವುದೇ ಹಕ್ಕು ಇಲ್ಲ ಎನ್ನುವುದು ಸುಳ್ಳು. ನಮಗೆ ಈ ಕೇಸಿನ ಪರಿಹಾರ ಹಣದಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲ ಎನ್ನುವುದು ಸುಳ್ಳು. ಕೆಲವು ದಾಖಲೆ ಸೃಷ್ಟಿ ಮಾಡಿ ಹಾಜರು ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಎದುರುದಾರ 6, 8, 9, 10 ಇವರಿಗೆ ಸಂಬಂಧಪಟ್ಟ ಕ್ರಯ ಪತ್ರದ ಪ್ರಕಾರ ಭೂಮಿಯ ಪರಿಹಾರ ಹಣ ಅವರಿಗೆ ಸಲ್ಲತಕ್ಕದ್ದು ಎನ್ನುವುದು ಸುಳ್ಳು.

**ಎ.ಸುನೀಲ್ ಕುಮಾರ್ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

**ದಿನಾಂಕ 07.12.2021 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎ.ಸುನೀಲ್ ಕುಮಾರ್ ವಕೀಲರಿಂದ ಎದುರುದಾರ 11 ರವರ ಪರವಾಗಿಃ**

16. ನಮ್ಮ ಮುತ್ತಾತನ ಹೆಸರು ಎ.ಚೌಡಯ್ಯ. ಎ ಅಂದರೆ ಅಂಗಡಿ ಚೌಡಯ್ಯ. ಎ. ಚೌಡಯ್ಯನ ಹೆಂಡತಿ ಹೆಸರು ಬೋರಮ್ಮ. ನಮ್ಮ ಮುತ್ತಜ್ಜಿ ಬೋರಮ್ಮ ಉಮ್ಮಡಹಳ್ಳಿಯಲ್ಲಿ ಅಂಗಡಿ ನಡೆಸುತ್ತಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ನಮ್ಮ ಮುತ್ತಜ್ಜಿ ಬೋರಮ್ಮ ಮತ್ತು ಎ.ಚೌಡಯ್ಯ ಅಂಗಡಿ ನಡೆಸುತ್ತಿದ್ದುದರಿಂದ ಅವರಿಗೆ ಅಂಗಡಿ ಚೌಡಯ್ಯ ಅಂತ ಜನ ಕರೆಯುತ್ತಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಹೇಳುತ್ತಾನೆ ನಮ್ಮ ಮುತ್ತಾತ ಎ.ಚೌಡಯ್ಯನಿಗೆ ಅಂಗಡಿ ಚೌಡಯ್ಯ ಅಂತ ಕರೆಯುತ್ತಿದ್ದರು. ನಮ್ಮ ಮುತ್ತಾತ ಎ.ಚೌಡಯ್ಯನಿಗೆ ಅಂಗಡಿ ವ್ಯಾಪಾರದಿಂದ ಸಾಕಷ್ಟು ಆದಾಯ ಇತ್ತು ಅನ್ನುವುದು ನನಗೆ ಗೊತ್ತಿಲ್ಲ. ನಮ್ಮ ಮುತ್ತಾತ ಎ.ಚೌಡಯ್ಯನಿಗೆ ಅಂಗಡಿ ವ್ಯಾಪಾರ ಮತ್ತು ಪೋಸ್ಟ್ ಮೆನ್ ಕೆಲಸದಿಂದ ಬಂದ ಹಣ ಕೂಡಿಸಿ ಪೂರ್ಣ ಸರ್ವೆ ನಂ.131 ಕ್ರಯಕ್ಕೆ ತೆಗೆದುಕೊಂಡನು ಅನ್ನುವುದು ನನಗೆ ಗೊತ್ತಿಲ್ಲ. ಎ.ಚೌಡಯ್ಯನ ತಂದೆಯ ಹೆಸರು ದೊಡ್ಡ ಚೌಡೇಗೌಡ. ದೊಡ್ಡ ಚೌಡೇಗೌಡನ ತಂದೆ ಹೆಸರು ಕೆಂಪೇಗೌಡ ಅಂತ ಕೇಳಿದ್ದೇನೆ ನಿಖರವಾಗಿ ಗೊತ್ತಿಲ್ಲ. ಮೂಲತ ಉಮ್ಮಡಹಳ್ಳಿ ಸರ್ವೆ ನಂ.131 ಕ್ಷೇತ್ರ 22 ಎಕರೆ ಜಮೀನು ದೊಡ್ಡ ಚೌಡೇಗೌಡ ಮತ್ತು ಕೆಂಪೇಗೌಡ ಹೆಸರಿನಲ್ಲಿ ಇದ್ದ ಪಹಣಿ ಕಂದಾಯ ದಾಖಲೆ ಹಾಜರು ಮಾಡಿರುವುದಿಲ್ಲ. ಅಂತಹ ದಾಖಲೆ ಸಿಕ್ಕಿರುವುದಿಲ್ಲ. ನಮ್ಮ ಮೂಲ ಪುರುಷ ದೊಡ್ಡ ಚೌಡೇಗೌಡ, ಕೆಂಪೇಗೌಡ ಇವರ ಹೆಸರಿನಲ್ಲಿ ಇರುವಂತ ಕಂದಾಯ ದಾಖಲೆ ಮತ್ತು ಪಹಣಿಯನ್ನು ನಾವು ಮಂಡ್ಯ ತಹಶೀಲ್ದಾರ್ ಕಚೇರಿ, ಕಂದಾಯ ಕಚೇರಿಯಲ್ಲಿ ಹುಡುಕಿದೆವು ಆದರೆ ಸಿಗಲಿಲ್ಲ. ನಾವು ಕಂದಾಯ ದಾಖಲೆ ಹುಡುಕಿದ ಬಗ್ಗೆ ಅರ್ಜಿ ಕೊಟ್ಟ ಕಾಪಿ ಹಾಜರು ಮಾಡಿರುವುದಿಲ್ಲ. ದಾಖಲೆ ಇರುವುದಿಲ್ಲ ಅಂತ ಕಂದಾಯ ಅಧಿಕಾರಿಗಳು ಹಿಂಬರಹ ಕೊಟ್ಟಿರುವುದಿಲ್ಲ. ಅಂತಹ ಹಿಂಬರಹವನ್ನು ನಾನು ಕೋರ್ಟಿಗೆ ಹಾಜರು ಮಾಡಿರುವುದಿಲ್ಲ.

17. ನಮ್ಮ ಮೂಲ ಪುರುಷ ದೊಡ್ಡ ಚೌಡೇಗೌಡ ಬಿನ್ ಕೆಂಪೇಗೌಡ ಮತ್ತು ಕೆಂಪೇಗೌಡ ಇವರ ಹೆಸರಿನಲ್ಲಿ ಸರ್ವೆ ನಂ. 131 ಕಂದಾಯ ದಾಖಲೆ ಇರಲಿಲ್ಲ ಎನ್ನುವುದು ಸುಳ್ಳು. ಅಂತಹ ದಾಖಲೆ ಇಲ್ಲದೇ ಇದ್ದುದರಿಂದ ನಮಗೆ ಸಿಕ್ಕಿಲ್ಲ ಎನ್ನುವುದು ಸುಳ್ಳು. ನಮ್ಮ ಮುತ್ತಾತ ಎ.ಚೌಡಯ್ಯನಿಗೆ, ಅದೊಂದೆ ಹೆಸರಿತ್ತು ಅವರಿಗೆ ಉರುಫ್ ಹೆಸರು ಇರಲಿಲ್ಲ ಎನ್ನುವುದು ಸುಳ್ಳು. ನಮ್ಮ ಮುತ್ತಾತ ಎ.ಚೌಡಯ್ಯನಿಗೆ ಚೌಡ, ಚೌಡೇಗೌಡ ಅಂತ ತೋರಿಸಲು record of rights ಇರುತ್ತದೆ. ಅದನ್ನು ಬಿಟ್ಟರೆ ಬೇರೆ ದಾಖಲೆ ನಾನು ನೋಡಿರುವುದಿಲ್ಲ. 1961-62 ಸಾಲಿನ record of rights ನಲ್ಲಿ ನಮ್ಮ ತಾತನ ಹೆಸರು ಎ.ಚೌಡಯ್ಯ ಅಲಿಯಾಸ್ ಚೌಡ ಅಂತ ಬರೆದಿಲ್ಲ. ಎ.ಚೌಡಯ್ಯ ಅಲಿಯಾಸ್ ಚೌಡ ಅಂತ 1961-62 record of rights ಬಿಟ್ಟರೆ ಬೇರೆ ದಾಖಲೆ ಇರುವುದಿಲ್ಲ. 1961-62 ನೇ ಸಾಲಿನಲ್ಲಿ ಉಮ್ಮಡಹಳ್ಳಿ ಗ್ರಾಮದಲ್ಲಿ ಚೌಡ, ಚೌಡೇಗೌಡ , ಚೌಡಯ್ಯ ಅನ್ನುವ ಹೆಸರಿನವರು ಎಷ್ಟು ಜನ ಇದ್ದರು ಅನ್ನುವುದು ನನಗೆ ಗೊತ್ತಿಲ್ಲ. ಈಗ ತೋರಿಸಿದ ನಿಡಿ.46 record of rights ನೋಡುತ್ತಿದ್ದೇನೆ. ಅದು ಸರ್ವೆ ನಂ.131 ಇದಕ್ಕೆ ಸಂಬಂಧಿಸಿದ್ದು. ಅದರಲ್ಲಿ ಜಂಜರ್ ನಂ.2682 ರ ಮುಂದೆ ಉಮ್ಮಡಹಳ್ಳಿ ದೊಡ್ಡ ಕೆಂಪೇಗೌಡ,

ಚೌಡೇಗೌಡನ ಮಗ ಮಂಡ್ಯ ಪೋಸ್ಟ್ ಮ್ಯಾನ್ ಎ.ಚೌಡಯ್ಯನಿಂದ ಆಧಾರ ರೂ.700/- ಅಂತ ದಿನಾಂಕ 14.11.1945 ರಂದು ಎಂಟ್ರಿ ಮಾಡಲಾಗಿದೆ ಎನ್ನುವುದು ನಿಜ. ಆ ಬರವಣಿಗೆ ನಮ್ಮ ಮುತ್ತಾತ ಎ.ಚೌಡಯ್ಯನಿಗೆ ಸಂಬಂಧಿಸಿದ್ದು.

18. ನಾನು ಹೇಳುವ ಹಾಗೆ ಕಂದಾಯ ದಾಖಲೆಗಳಲ್ಲಿ ನಮ್ಮ ಮುತ್ತಾತನ ಹೆಸರು ಚೌಡ ಅಲಿಯಾಸ್ ಚೌಡೇಗೌಡ ಅಂತ ಇರುವುದಿಲ್ಲ ಅನ್ನುವುದು ಸುಳ್ಳು. ನಮ್ಮ ಮುತ್ತಾತನ ಹೆಸರು ಕೇವಲ ಎ.ಚೌಡಯ್ಯ ಬಿನ್ ಚೌಡೇಗೌಡ ಅಂತ ಕಂದಾಯ ದಾಖಲೆಗಳಲ್ಲಿ ಮಾತ್ರ ಇರುತ್ತದೆ ಎನ್ನುವುದು ಸುಳ್ಳು. ನಿಡಿ. 46 record of rights ನಲ್ಲಿ ಮೇಲುಗಡೆ ಮೊದಲನೆ ಹೆಸರು ಬರೆದಂತ ವ್ಯಕ್ತಿ ಚೌಡ ಬಿನ್ ಚೌಡೇಗೌಡ ಅಂತ ಬರೆದಿರುವ ವ್ಯಕ್ತಿ ನಮ್ಮ ಮುತ್ತಾತ ಆಗಿರುವುದಿಲ್ಲ ಎನ್ನುವುದು ಸುಳ್ಳು. ನಿಡಿ.46 record of rights ನಲ್ಲಿ ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ಇದರ ಸಂಪೂರ್ಣ ಕ್ಷೇತ್ರ ಬರೆದಿಲ್ಲ ಎನ್ನುವುದು ನಿಜ. ನಿಡಿ.46 ದಾಖಲೆಯಲ್ಲಿ ಸರ್ವೆ ನಂ.131 ಇದನ್ನು ಎಂ.ಆರ್.24/1936-37 ರಲ್ಲಿ ಪಡೆಯಲಾಗಿದೆ ಅಂತ ಬರವಣಿಗೆ ಇದೆ ಎನ್ನುವುದು ನಿಜ. ಎಂ.ಆರ್.ನಂ.24/1936-37 ಇದನ್ನು ನಾನು ಕಂದಾಯ ಕಚೇರಿಯಲ್ಲಿ ಪಡೆಯಲು ಪ್ರಯತ್ನ ಪಟ್ಟೆ ಆದರೆ ಸಿಗಲಿಲ್ಲ. ಸದರಿ ದಾಖಲೆ ಕೇಳಿ ಅರ್ಜಿ ಕೊಟ್ಟ ಬಗ್ಗೆ ಅರ್ಜಿ ಕಾಪಿ ಹಾಜರು ಮಾಡಿರುವುದಿಲ್ಲ. ಅದೇ ರೀತಿ ಎಂ.ಆರ್.24/1936-37 ದಾಖಲೆ ಇರುವುದಿಲ್ಲ ಅಂತ ಹಿಂಬರಹವನ್ನು ಕಂದಾಯ ಅಧಿಕಾರಿಗಳು ನನಗೆ ಕೊಟ್ಟಿಲ್ಲ ಮತ್ತು ಅಂತಹ ದಾಖಲೆ ನಾನು ಕೋರ್ಟಿಗೆ ಹಾಜರು ಮಾಡಿಲ್ಲ. ನಿಡಿ.46 record of rights ದಾಖಲೆ ಬಿಟ್ಟರೆ ಸರ್ವೆ ನಂ.131 ಇದು ನಮ್ಮ ಮುತ್ತಾತ ಎ.ಚೌಡಯ್ಯ ಇವರ ಪಿತ್ರಾರ್ಜಿತ ಆಸ್ತಿ ಅಂತ ತೋರಿಸಲು ಬೇರೆ ದಾಖಲೆ ಹಾಜರು ಮಾಡಿರುವುದಿಲ್ಲ.

19. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ರಲ್ಲಿ ಎ.ಚೌಡಯ್ಯ ಬಿನ್ ದೊಡ್ಡಚೌಡೇಗೌಡ ಬಿಟ್ಟರೆ ಬೇರೆ ಯಾರಿಗೂ ಜಮೀನು ಇರುವುದಿಲ್ಲ. ನಿಡಿ.46 record of rights ನಲ್ಲಿ 5-6 ಜನರ ಹೆಸರು ಇರುತ್ತವೆ ಎನ್ನುವುದು ನಿಜ. ನಿಡಿ.46 record of rights ನಲ್ಲಿ ತಹಶೀಲ್ದಾರ್ ಕಚೇರಿಯ ನೌಕರುದಾರರ ಜೊತೆಗೆ ಶಾಮೀಲಾಗಿ ಅದರಲ್ಲಿರುವ ಎಂಟ್ರಿ ನಂ.1 ಅನ್ನು ಅಂದರೆ ಚೌಡ ಬಿನ್ ಚೌಡೇಗೌಡ ಅನ್ನುವ ಅಕ್ಷರಗಳನ್ನು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸುಳ್ಳು. ನಿಡಿ.46 ದಾಖಲೆಯನ್ನು ನಾನು ತಹಶೀಲ್ದಾರ್ ಕಚೇರಿಯಿಂದ ಸ್ವತಃ ತೆಗೆದುಕೊಂಡಿಲ್ಲ. ಅದು ನಮ್ಮ ಮನೆಯಲ್ಲಿ ಇತ್ತು. ಅದನ್ನೇ ಕೋರ್ಟಿಗೆ ಹಾಜರು ಮಾಡಿದ್ದೇನೆ. ನಿಡಿ.46 record of rights ದಾಖಲೆಯನ್ನು ಯಾರು ತಹಶೀಲ್ದಾರ್ ಕಚೇರಿಯಿಂದ ತಂದಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ನಿಡಿ.46 ಆರ್.ಆರ್. ದಾಖಲೆಯಲ್ಲಿ ಜಂಜರ್ ನಂಬರ್ 722 ಮುಂದೆ ಬರೆದ ಚವುಡ ಬಿನ್ ಚವುಡೇಗೌಡ ಅನ್ನುವ ಅಕ್ಷರ ಉಳಿದ ಸಾಲಿನ ಅಕ್ಷರಗಳಿಗಿಂತ ಬಿನ್ನವಾಗಿದೆ ಎನ್ನುವುದು ಸರಿಯಲ್ಲ. ನಿಡಿ.46 ಜಂಜರ್ ನಂ.722 ಮುಂದಿರುವ ಅಕ್ಷರಗಳನ್ನು ಬೇರೆ ವ್ಯಕ್ತಿ ಬರೆದು ಸೇರ್ಪಡೆ ಮಾಡಿದ್ದಾರೆ ಎನ್ನುವುದು ಸುಳ್ಳು. ನಮಗೆ ಅನುಕೂಲ ಆಗುವ ರೀತಿಯಲ್ಲಿ, ನಿಡಿ.46 ಆರ್.ಆರ್ ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸುಳ್ಳು.

20. ನಮ್ಮ ತಾಯಿ ರತ್ನಮ್ಮ ವಿದ್ಯಾವಂತಳಾಗಿರುವುದಿಲ್ಲ. ಅವಳು ವಿದ್ಯಾಭ್ಯಾಸ ಮಾಡಿರುವುದಿಲ್ಲ . ಅವಳು ಕೇವಲ ಸಹಿ ಮಾಡುವುದು ಕಲಿತಿದ್ದಾಳೆ. ಎದುರುದಾರ 5 ಪುಟ್ಟತಾಯಮ್ಮ ನನಗೆ ಚಿಕ್ಕಮ್ಮ ಆಗಬೇಕು. ಅವಳಿಗೆ ಸಹಿ ಮಾಡಲು ಬರುವುದಿಲ್ಲ. ಅವಳಿಗೆ ಓದು ಬರಹ ಬರುವುದಿಲ್ಲ. ಎದುರುದಾರ 5 ಪುಟ್ಟತಾಯಮ್ಮ ಹೆಬ್ಬೆಟ್ಟಿನ ಗುರುತು ಹಾಕುತ್ತಾಳೆ. ಎದುರುದಾರ 5 ಪುಟ್ಟತಾಯಮ್ಮ ಮದುವೆಯಾದ ನಂತರ ಗಂಡನ ಊರಾದ ಬೈರಾಪಟ್ಟಣದಲ್ಲಿ ವಾಸವಾಗಿದ್ದಳು. ಆದರೆ ನಮ್ಮ ತಾಯಿ ಮದುವೆಯಾದ ನಂತರ ನನ್ನ ತಂದೆ ಊರಾದ ಹೆಚ್. ಬಸಾಪುರ ಗ್ರಾಮದಲ್ಲಿ ವಾಸ ಮಾಡುತ್ತಿರಲಿಲ್ಲ. ಅವಳು ಮಂಡ್ಯ ಉಮ್ಮಡಹಳ್ಳಿಯಲ್ಲಿ ವಾಸವಾಗಿದ್ದಳು. ನಮ್ಮ ತಾಯಿ ರತ್ನಮ್ಮ ಉಮ್ಮಡಹಳ್ಳಿ ಯಲ್ಲಿ ವಾಸವಾಗಿದ್ದಳು ಅಂತ ತೋರಿಸಲು voter ID ಮತ್ತು ಆಧಾರ್ ಕಾರ್ಡ್ ಇರುತ್ತವೆ. ಸರ್ವೆ ನಂ.131/8 ರಲ್ಲಿ 14 ಗುಂಟೆ ಜಮೀನು ನಮ್ಮ ತಾಯಿ ರತ್ನಮ್ಮ ಹೆಸರಿಗೆ ಪಹಣಿ ಬರುತ್ತದೆ. ಈಗಲೂ ಕೂಡ ಎಂಟ್ರಿ ಇದೆ. ನಿಡಿ.21 ಸರ್ವೆ ಟಿಪ್ಪಣಿ ದಾಖಲೆ ನೋಡುತ್ತಿದ್ದೇನೆ. ಅದರಲ್ಲಿ ಸರ್ವೆ ನಂ.131/8 ಕ್ಷೇತ್ರ 14 ಗುಂಟೆ ಜಮೀನನ್ನು ನಕಾಶೆಯಲ್ಲಿ ದಕ್ಷಿಣಕ್ಕೆ ತೋರಿಸಿದ್ದಾರೆ ಎನ್ನುವುದು ನಿಜ. ಅಂದರೆ ಮೈಸೂರು ರಸ್ತೆಯಿಂದ ಒಳಗಡೆ ಇರುತ್ತದೆ. ಎಸ್.ಎಲ್.ಎ.ಒ ಕಚೇರಿ ದಾಖಲೆ ಪ್ರಕಾರ ಸರ್ವೆ ನಂ.131/9 ರಲ್ಲಿ ಕ್ಷೇತ್ರ 202 sq mtr ರಸ್ತೆಗೆ ಸ್ವಾಧೀನ ಪಡಿಸಿಕೊಂಡಿದ್ದಾರೆ ಅಂತ ತೋರಿಸುತ್ತದೆ ಎನ್ನುವುದು ನಿಜ. ಸ್ವಾಧೀನ ಪಡಿಸಿಕೊಂಡ ಸರ್ವೆ ನಂ.131/9 ಕ್ಷೇತ್ರ 202 sq mtr ಜಾಗದಿಂದ ಸರ್ವೆ ನಂ.131/8 ಜಮೀನು ಸುಮಾರು 400 ಮೀಟರ್ ದೂರದಲ್ಲಿದೆ. ನಿಡಿ.21 ಸರ್ವೆ ಟಿಪ್ಪಣಿಯಲ್ಲಿ ಮೈಸೂರು ರಸ್ತೆಗೆ ಹೊಂದಿಕೊಂಡು ಸರ್ವೆ ನಂ.131/4 ಹೊಂದಿಕೊಂಡಿದೆ ಎನ್ನುವುದು ನಿಜ. ಸರ್ವೆ ನಂ.131/4 ಇದು ಕೆ.ಆರ್.ಚಂದ್ರಶೇಖರ್ ಇವರಿಗೆ ಸೇರಿದ್ದು ಅನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂ. 131/5, 131/6, 131/7 ಇವುಗಳ ಮಾಲೀಕರ ಹೆಸರು ನನಗೆ ಗೊತ್ತಿಲ್ಲ.

21. ನಾನು ನ್ಯಾಯಾಲಯದಲ್ಲಿ ಈ ಕೇಸಲ್ಲಿ ನನ್ನ ಪರವಾಗಿ ಮಾತ್ರ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ಆದರೆ ಎದುರುದಾರ 1 ರಿಂದ 5, 47 ರಿಂದ 55 ಇವರ ಪರವಾಗಿ ಸಾಕ್ಷಿ ನುಡಿದಿರುವುದಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ರಲ್ಲಿ ಎದುರುದಾರ 1 ರಿಂದ 5 , 47 ರಿಂದ 55 ಇವರು ಆಸ್ತಿಗೆ ಸಂಬಂಧಪಟ್ಟ ಹಾಗೆ ಏನೇನು ವ್ಯವಹಾರ ಮಾಡಿದ್ದಾರೆ, ಅವರಿಗೆ ಜಮೀನು ಹೇಗೆ ಬಂತು ಅನ್ನುವುದು ನನಗೆ ಗೊತ್ತಿಲ್ಲ. ಎ.ಚೌಡಯ್ಯ ನ ಮೊದಲನೇ ಮಗ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ 1960-61 ರಲ್ಲಿ ಮೃತ ಪಟ್ಟಿದ್ದಾನೆ. ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಮೃತ ಪಟ್ಟ ಸಮಯದಲ್ಲಿ ಸರ್ವೆ ನಂ.131 ಜಮೀನು ಪಹಣಿ ಅವನ ಹೆಸರಿನಲ್ಲಿ ಇರಲಿಲ್ಲ. ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಮೃತ ಪಡುವ ಕಾಲಕ್ಕೆ ಸರ್ವೆ ನಂ.131 ಬಿಟ್ಟರೆ ಬೇರೆ ಜಮಿನು ಅವನ ಹೆಸರಿನಲ್ಲಿ ಇರಲಿಲ್ಲ. ನಮ್ಮ ತಾಯಿ ರತ್ನಮ್ಮ ಮತ್ತು ಅವರ ತಂಗಿ ಪುಟ್ಟತಾಯಮ್ಮ ಇವರಿಗೆ ಯಾರು ಮದುವೆ ಮಾಡಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಹೇಳುತ್ತಾನೆ ಒಟ್ಟು ಕುಟುಂಬದ ವತಿಯಿಂದ ಮದುವೆ ಮಾಡಿದ್ದಾರೆ. ನಮ್ಮ ತಾಯಿ ರತ್ನಮ್ಮ ಮತ್ತು ಪುಟ್ಟತಾಯಮ್ಮ ಇವರ ಮದುವೆ ಎಷ್ಟನೆ ಇಸವಿಯಲ್ಲಿ ಆಗಿದೆ ನನಗೆ ಗೊತ್ತಿಲ್ಲ, ಎಷ್ಟು ವರ್ಷದ ಹಿಂದೆ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ತಾಯಿ ರತ್ನಮ್ಮ ಹೆಸರಿನಲ್ಲಿ ಸರ್ವೆ ನಂ.131/8 ಕ್ಷೇತ್ರ 14 ಗುಂಟೆ ಜಮೀನು 1979-80 ರಲ್ಲಿ ಎಂಟ್ರಿ ಬಂದಿದೆ. ನಮ್ಮ ತಾಯಿ ರತ್ನಮ್ಮ ಇವರಿಗೆ ಸರ್ವೆ ನಂ.131/8 ಇದು ಯಾವುದೇ ನೋಂದ ದಾಖಲೆ

ಮುಖಾಂತರ ಬಂದಿಲ್ಲ. ಆದರೆ ಸುಮ್ಮನೆ ಕಂದಾಯ ದಾಖಲೆಗಳಲ್ಲಿ ನಮ್ಮ ತಾಯಿ ಹೆಸರಿನಲ್ಲಿ ಎಂಟ್ರಿ ಮಾಡಿದ್ದಾರೆ. ನಮ್ಮ ತಾಯಿ ರತ್ನಮ್ಮ ಬದುಕಿದ್ದಾಗ ಸರ್ವೆ ನಂ.131/8 ಜಮೀನಲ್ಲಿ ವಾಸ ಇರಲಿಲ್ಲ . ಅಂದರೆ ಜಮೀನು ಇರುವ ಉಮ್ಮಡಹಳ್ಳಿಯಲ್ಲಿ ಇರಲಿಲ್ಲ. ಸರ್ವೆ ನಂ.131 ರಿಂದ ನಮ್ಮ ತಾಯಿ ವಾಸವಾಗಿದ್ದ ಉಮ್ಮಡಹಳ್ಳಿಯಿಂದ ಒಂದು ವರೆ ಕಿ.ಮಿ ದೂರ ಇದೆ.

22. ನಮ್ಮ ತಾಯಿ ರತ್ನಮ್ಮ ಉಮ್ಮಡಹಳ್ಳಿಯಲ್ಲಿ ವಾಸವಾಗಿದ್ದಾಗ, ಎ.ಚೌಡಯ್ಯನ ಕುಟುಂಬದಲ್ಲಿ ನಡೆಯುವ ವ್ಯವಹಾರಗಳು ಅವಳಿಗೆ ಗೊತ್ತಾಗುತ್ತಿತ್ತೋ ಹೇಗೋ ಅನ್ನುವುದು ನನಗೆ ಗೊತ್ತಿಲ್ಲ. ಎ.ಚೌಡಯ್ಯನ ಮೊಮ್ಮಕ್ಕಳು ಕೆಲವರು ನಮ್ಮ ಜೊತೆಗೆ ಮಾತನಾಡುತ್ತಾರೆ ಇನ್ನೂ ಕೆಲವರು ಮಾತನಾಡುವುದಿಲ್ಲ. ಅಂದರೆ ಎ.ಚೌಡಯ್ಯನ ಬೇರೆ ಮೊಮ್ಮಕ್ಕಳು ನಮ್ಮ ಜೊತೆಗೆ ಅಷ್ಟಕಷ್ಟೆ ಇದ್ದಾರೆ. ನಮ್ಮ ತಾಯಿ ರತ್ನಮ್ಮ ಬದುಕಿದ್ದಾಗ ಎ.ಚೌಡಯ್ಯ ಮನೆತನದ ವಿಚಾರಗಳನ್ನು, ಜಮೀನು ವಿಚಾರವನ್ನು ನಾನು ನಮ್ಮ ತಾಯಿಯಿಂದ ಕೇಳಿ ತಿಳಿದುಕೊಂಡಿರುವುದಿಲ್ಲ. ಒ.ಎಸ್.46/2010 ಕೇಸು ದಾಖಲು ಮಾಡುವ ಕಾಲಕ್ಕೆ ಮೇಲೆ ಹೇಳಿದ ವಿಷಯಗಳನ್ನು ನಾನು ತಿಳಿದುಕೊಂಡಿದ್ದೆನು. ನಮ್ಮ ಮುತ್ತಾತ ಎ.ಚೌಡಯ್ಯ ಬದುಕಿದ್ದಾಗ ಮಕ್ಕಳಿಗೆ ಕುಟುಂಬದ ಜಮೀನುಗಳನ್ನು ಹಂಚಿ ಪಾಲು ಪತ್ರ ದಾಖಲೆ ಬರೆದಿರುವುದಿಲ್ಲ. ನಮ್ಮ ತಾಯಿ ಹೇಳಿದ ಪ್ರಕಾರ ಎ.ಚೌಡಯ್ಯ ಜಮೀನುಗಳನ್ನು ಮೌಖಿಕವಾಗಿ ಹಂಚಿದ್ದ. ಎ.ಚೌಡಯ್ಯ ಬದುಕಿದ್ದಾಗ ಮತ್ತು ತೀರಿಕೊಂಡಾಗ ಅವನ ಮಕ್ಕಳು ನಮಗೆ ಆಸ್ತಿಯಲ್ಲಿ ಭಾಗ ಕೊಟ್ಟಿಲ್ಲ ಅಂತ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಪಾಲು ವಿಬಾಗ ಕೇಳಿ ಕೇಸು ದಾಖಲು ಮಾಡಿರುವುದಿಲ್ಲ.

**ಸುನೀಲ್ ಕುಮಾರ್ ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

**ದಿನಾಂಕ 15.12.2021 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಎ.ಸುನೀಲ್ ಕುಮಾರ್ ವಕೀಲರಿಂದ ಎದುರುದಾರ 11 ರವರ ಪರವಾಗಿಃ**

23. ಎ.ಚೌಡಯ್ಯ ಮುಖಾಂತರ ಎದುರುದಾರ 10 ಪಶುಪತಿ ಇವರಿಗೆ ಬಂದಂತ ಆಸ್ತಿ ಸರಿಯಲ್ಲ ಅವು ತಪ್ಪು ಎಂಟ್ರಿ ಅಂತ ಎ.ಚೌಡಯ್ಯನ ವಾರಾಸುದಾರರು ಯಾರಾದರೂ ಸಿವಿಲ್ ಕೇಸು ಹಾಕಿದ್ದಾರೋ ಹೇಗೋ ಅನ್ನುವುದು ನನಗೆ ಗೊತ್ತಿಲ್ಲ. ಎ.ಚೌಡಯ್ಯ ಇವರಿಂದ ಎದುರುದಾರ 10 ಪಶುಪತಿ ಇವರಿಗೆ 12 ಐಟಂ ಜಮೀನು ಬಂದಿರುತ್ತವೆ. ಅಂದರೆ 8 ರಿಂದ 9 ಎಕರೆ ಜಮೀನು ಬಂದಿರಬಹುದು. ತಾತಾ ಎ.ಚೌಡಯ್ಯ ಇವನ ಇತರೆ ಮಕ್ಕಳಿಗೆ ಎಷ್ಟು ಎಕರೆ ಜಮೀನು ಹೋಗಿದೆ, ಎಷ್ಟು ಐಟಂ ಆಸ್ತಿ ಹೋಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಎ.ಚೌಡಯ್ಯ ಇವರಿಂದ ಎದುರುದಾರ 10 ಪಶುಪತಿ ಇವರಿಗೆ 1963 ರಿಂದ ಆಸ್ತಿ ಬರಲು ಪ್ರಾರಂಭ ಮಾಡಿದವು ಎಂದರೆ ಇರಬಹುದು. 1963 ರಲ್ಲಿ ನಿಡಿ.12 ವ್ಯವಸ್ಥ ಪತ್ರ ಮುಖಾಂತರ ಎದುರುದಾರ 10 ಪಶುಪತಿಗೆ ಸರ್ವೆ ನಂ.131 ಮೊದಲನೇ ಬಾರಿಗೆ ಬಂದಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನಿಡಿ.12 ವ್ಯವಸ್ಥ ಪತ್ರದ ಮುಖಾಂತರ ಎ.ಚೌಡಯ್ಯ ಇತನು ತನ್ನ ಬೇರೆ ಬೇರೆ ಮಕ್ಕಳಿಗೆ ಕೂಡ ಬೇರೆ ಬೇರೆ ಜಮೀನು ಹಂಚಿಕೆ ಮಾಡಿದ್ದಾನೆ ಅನ್ನುವುದು ನನಗೆ ಗೊತ್ತಿಲ್ಲ. ದಿನಾಂಕಃ 12.12.1963 ರಂದು ಎ ಚೌಡಯ್ಯ ಇವರು ತನ್ನ ಮಕ್ಕಳಿಗೆ ವ್ಯವಸ್ಥಾ ಪತ್ರ ಮೂಲಕ ಆಸ್ತಿ ವಿತರಣೆ ಮಾಡಿ ದಾಖಲೆ ನೋಂದಣಿ ಮಾಡಿರುತ್ತಾನೆ ಎಂದರೆ ಇರಬಹುದು. ಆ ದಾಖಲೆ ತಪ್ಪಾಗಿರುತ್ತದೆ. ಎದುರುದಾರ 10 ಪಶುಪತಿ ಇವರ ತಂಗಿ ರತ್ನಮ್ಮ ಇವರು ಬದುಕಿದ್ದಾಗ ನಿಡಿ.12 ವ್ಯವಸ್ಥಾ ಪತ್ರ ಸರಿಯಲ್ಲ ಅಂತ ಸಿವಿಲ್ ಕೇಸು ದಾಖಲು ಮಾಡಿರುವುದಿಲ್ಲ. ನಮ್ಮ ತಾಯಿ ರತ್ನಮ್ಮ ಬದುಕಿದ್ದಾಗ ಓ ಎಸ್ 46/2010 ದಾಖಲು ಮಾಡಿದ್ದಾರೆ. ಎ ಚೌಡಯ್ಯ ಇವರಿಂದ ಎದುರುದಾರ 10 ಪಶುಪತಿ ಇವರಿಗೆ ಬಂದಂತಹ ಆಸ್ತಿಗಳನ್ನು ಮಾತ್ರ ಷೆಡ್ಯೂಲ್ ಆಸ್ತಿ ಮಾಡಿ ಓ ಎಸ್ 46/2010 ನ್ನು ದಾಖಲು ಮಾಡಲಾಗಿದೆ. ಅಂದರೆ ಎ ಚೌಡಯ್ಯ ನಿಂದ ತನ್ನ ಬೇರೆ ಮಕ್ಕಳಿಗೆ ಹೋದಂತಹ ಆಸ್ತಿಗಳನ್ನು ಪ್ರಶ್ನೆ ಮಾಡಿ ಕೇಸು ದಾಖಲು ಮಾಡಿರುವುದಿಲ್ಲ.

24. ಎ ಚೌಡಯ್ಯ ಇವರಿಂದ ಎದುರುದಾರ 10 ಪಶುಪತಿ ಇವರಿಗೆ ನೋಂದಣಿ ದಾಖಲೆ ಪ್ರಕಾರ ಕಾನೂನು ಪ್ರಕಾರ ಬಂದ ಆಸ್ತಿಗಳಲ್ಲಿ ಭಾಗ ಕೇಳಿ ಓ ಎಸ್ 46/2010 ದಾಖಲು ಮಾಡಿದ್ದೇನೆ ಅನ್ನುವುದು ಸರಿಯಲ್ಲ. ಎ ಚೌಡಯ್ಯ ಇವರಿಂದ ತನ್ನ ಬೇರೆ ಮಕ್ಕಳಿಗೆ ಕೊಟ್ಟಂತಹ ಆಸ್ತಿಗಳನ್ನು ಓ ಎಸ್ 46/2010 ರಲ್ಲಿ ಭಾಗ ಕೇಳಿ ಷೆಡ್ಯೂಲ್ ಆಸ್ತಿ ಅಂತ ಮಾಡಿರುವುದಿಲ್ಲ. ಎ ಚೌಡಯ್ಯನಿಂದ ನಿಡಿ.12 ವ್ಯವಸ್ಥಾ ಪತ್ರ ಮುಖಾಂತರ ಬಂದಂತಹ ಆಸ್ತಿ ಬಿಟ್ಟರೆ ಎದುರುದಾರ 10 ಪಶುಪತಿಗೆ ಬೇರೆ ಆಸ್ತಿ ಸಂಪಾದನೆ ಮಾಡಿರುವುದಿಲ್ಲ. " ನಮ್ಮಗಳ ಬಾಬತ್ತು ಸ್ವಯಾರ್ಜಿತ ಸ್ವತ್ತುಗಳನ್ನು ನಮ್ಮ ಆತ್ಮಸಂತೋಷದಿಂದ ಅವರವರಿಗೆ ವ್ಯವಸ್ಥೆ ಮಾಡಿಕೊಟ್ಟಿರುತ್ತೇನೆ" ಅಂತ ನಿಡಿ.12 ವ್ಯವಸ್ಥಾ ಪತ್ರದಲ್ಲಿ ಬರೆದಿದ್ದಾರೆ ಎನ್ನುವುದು ನಿಜ. ಸದರಿ ಭಾಗವನ್ನು ನಿಡಿ.12(ಎ) ಅಂತ ಗುರ್ತಿಸಲಾಯಿತು. ಸಾಕ್ಷಿ ಹೇಳುತ್ತಾನೆ ಆ ದಾಖಲೆ ಸುಳ್ಳು. ಅದೇ ರೀತಿ ನಿಡಿ.12 ವ್ಯವಸ್ಥಾ ಪತ್ರದಲ್ಲಿ "ನನ್ನ ಹೆಸರಿನಲ್ಲಿರುವ ಉಳಿಕೆ ಆಸ್ತಿಗಳು ನಮ್ಮ ಸ್ವಯಾರ್ಜಿತವಾಗಿ

ಬಂದಿರುವುದರಿಂದ ನಮಗೆ ಮಾತ್ರ ಹಕ್ಕು, ಮಕ್ಕಳಿಗೆ ಹಕ್ಕಿಲ್ಲ " ಅಂತ ಬರೆಯಲಾಗಿದೆ ಎನ್ನುವುದು ನಿಜ. ಸದರಿ ಒಕ್ಕಣಿಕೆಯನ್ನು ನಿಡಿ12(ಬಿ) ಅಂತ ಗುರ್ತಿಸಲಾಯಿತು. ಆ ದಾಖಲೆ ಸುಳ್ಳು. ಅದೇ ರೀತಿ ನಮ್ಮ ತಾತ ಎ.ಚೌಡಯ್ಯ ಬದುಕಿದ್ದಾಗ ದಿನಾಂಕಃ 02.03.1978 ರಂದು ವ್ಯವಸ್ಥಾ ಪತ್ರವನ್ನು ಮಾಡಿದ್ದರು ಎಂದರೆ ಇರಬಹುದು. ಅದೇ ರೀತಿ ದಿನಾಂಕಃ 20.04.1972 ರಂದು ಎ ಚೌಡಯ್ಯ ಇವರು ಎದುರುದಾರ 10 ಪಶುಪತಿ ಇವರಿಗೆ ನಿಡಿ.11 ಮರಣ ಶಾಸನ ಪ್ರಕಾರ ಸರ್ವೆ ನಂ. 131/2 ರಲ್ಲಿ 1 ಎಕರೆ 5 ಗುಂಟೆ ಜಮೀನನ್ನು ವಿಲ್ ಮುಖಾಂತರ ಕೊಟ್ಟಿರುತ್ತಾರೆ ಅಂತ ಪ್ರಶ್ನೆ ಕೇಳಿದ್ದಕ್ಕೆ ಸಾಕ್ಷಿ ಹೇಳುತ್ತಾನೆ ದಾಖಲೆ ಎಂಟ್ರಿ ಇರಬಹುದು ಆದರೆ ಅದು ತಪ್ಪು ದಾಖಲೆ. ನಮ್ಮ ತಾಯಿ ರತ್ನಮ್ಮ ಬದುಕಿದ್ದಾಗ ಮತ್ತು ಎ ಚೌಡಯ್ಯನ ಇತರೇ ಮಕ್ಕಳು ದಿನಾಂಕಃ 02.03.1978 ರಂದು ಆದ ವ್ಯವಸ್ಥಾ ಪತ್ರವನ್ನು ಪ್ರಶ್ನೆ ಮಾಡಿ ಸಿವಿಲ್ ಕೇಸು ದಾಖಲು ಮಾಡಿರುವುದಿಲ್ಲ. ಅದೇ ರೀತಿ ಎ ಚೌಡಯ್ಯನ ಇತರೇ ಮಕ್ಕಳು ಮತ್ತು ನಮ್ಮ ತಾಯಿ ರತ್ನಮ್ಮ ಇವರು ದಿನಾಂಕಃ 20.04.1972 ರಂದು ಎದುರುದಾರ 10 ಪಶುಪತಿಗೆ ಬರೆದುಕೊಟ್ಟ ನಿಡ್ಡಿ.11 ಮರಣ ಶಾಸನ ವನ್ನು ಪ್ರಶ್ನೆ ಮಾಡಿ ಸಿವಿಲ್ ಕೇಸು ಹಾಕಿರುವುದಿಲ್ಲ. ಸಾಕ್ಷಿ ಹೇಳುತ್ತಾನೆ ಚೌಡಯ್ಯನ ಇತರೇ ಮಕ್ಕಳು ಕೇಸು ಹಾಕಿದ್ದ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನಮ್ಮ ತಾಯಿ ರತ್ನಮ್ಮ ಮಾತ್ರ ಓ ಎಸ್ 46/2010 ಹಾಕಿರುತ್ತಾರೆ. ಓ ಎಸ್ 46/2010 ಕೇಸನ್ನು ಬಿಟ್ಟರೆ ಸರ್ವೆ ನಂ.131 ಕ್ಷೇತ್ರ 22 ಎಕರೆ ಜಮೀನಿಗೆ ಸಂಬಂಧಪಟ್ಟ ಹಾಗೆ ಬೇರೆ ಸಿವಿಲ್ ಕೇಸು ಚಾಲ್ತಿ ಇರುವುದಿಲ್ಲ.

25. ಎ ಚೌಡಯ್ಯ ಅನುಭವಿಸುವಂತಹ ಶೇಖಡ 50 ಆಸ್ತಿಗಳನ್ನು ಎದುರುದಾರ 10 ಪಶುಪತಿಗೆ ಕೊಟ್ಟಿರುತ್ತಾರೆ, ಕಡಿಮೆ ಕ್ಷೇತ್ರದ ಆಸ್ತಿಗಳನ್ನು ಉಳಿದ 5 ಮಕ್ಕಳಿಗೆ ಕೊಟ್ಟಿರುತ್ತಾರೆ ಎಂದರೆ ಇರಬಹುದು. ಎದುರುದಾರ 10 ಪಶುಪತಿಗೆ ಹೆಚ್ಚಿನ ಪ್ರಮಾಣ ಆಸ್ತಿ ಕೊಡಲಾಗಿದೆ ಅಂತ ಪ್ರಶ್ನೆ ಮಾಡಿ ಎ ಚೌಡಯ್ಯನ ಇತರೇ 5 ಜನ ಮಕ್ಕಳು ಸಿವಿಲ್ ಕೇಸು ದಾಖಲು ಮಾಡಿರುವುದಿಲ್ಲ. ಸರ್ವೆ ನಂ.131 ಇದು ಎ ಚೌಡಯ್ಯನ ಸ್ವಯಾರ್ಜಿತ ಆಸ್ತಿ, ಅದನ್ನು ಅವನು ಹೇಗಾದರೂ ವಿಲೇವಾರಿ ಮಾಡಬಹುದು, ನಮಗೆ ಪ್ರಶ್ನೆ ಮಾಡಲು ಹಕ್ಕಿಲ್ಲ ಅಂತ ಎ ಚೌಡಯ್ಯನ ಇತರೇ ಮಕ್ಕಳು ಎದುರುದಾರ 10 ಪಶುಪತಿಗೆ ಆಸ್ತಿ ಕೊಟ್ಟಿದನ್ನು ಪ್ರಶ್ನೆ ಮಾಡಿಲ್ಲ ಅನ್ನುವುದು ನನಗೆ ಗೊತ್ತಿಲ್ಲ. ಎ ಚೌಡಯ್ಯ ಇವರಿಂದ ನಿಡಿ.11 ಮತ್ತು 12 ವ್ಯವಸ್ಥಾ ಪತ್ರ ಮುಖಾಂತರ ಬಂದಂತಹ ಆಸ್ತಿಗಳನ್ನು ಎ ಚೌಡಯ್ಯನ ಮಕ್ಕಳು ತಮ್ಮ ತಮ್ಮ ಹೆಸರಿನಲ್ಲಿ 1963 ಮತ್ತು 1978 ರಲ್ಲಿ ಖಾತೆ ಪಹಣಿ ಮಾಡಿಕೊಂಡಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. 1963 ಮತ್ತು 1978 ರಲ್ಲಿ ಆದಂತಹ ಖಾತೆ ಪಹಣಿ ಎಂಟ್ರಿಗಳನ್ನು ನಮ್ಮ ತಾಯಿ ರತ್ನಮ್ಮ ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನೆ ಮಾಡಿರುವುದಿಲ್ಲ. 1963,1978 ವ್ಯವಸ್ಥಾ ಪತ್ರ ಮುಖಾಂತರ ಕೆಲವು ಆಸ್ತಿ ಎದುರುದಾರ 10 ಪಶುಪತಿಗೆ ಬಂದಿವೆ ಅಂತ ನಮ್ಮ ತಾಯಿ ರತ್ನಮ್ಮನಿಗೆ ಗೊತ್ತಿತ್ತಾ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿ ಹೇಳುತ್ತಾನೆ ವಿಭಾಗದ ಮುಖಾಂತರ ಎದುರುದಾರ 10 ಪಶುಪತಿಗೆ ಮತ್ತು ಇತರೇಯವರಿಗೆ ಆಸ್ತಿ ಬಂದಿವೆ ಅಂತ ಗೊತ್ತಿತ್ತು. ವ್ಯವಸ್ಥಾ ಪತ್ರದ ಬಗ್ಗೆ ನಮ್ಮ ತಾಯಿಗೆ ಗೊತ್ತಿರಲಿಲ್ಲ. ಎದುರುದಾರ 10 ಪಶುಪತಿಗೆ ಕಂದಾಯ ದಾಖಲೆ ಯಾವ ರೀತಿ ಬಂದಿದೆ, ಅವನ ಹೆಸರಿನಲ್ಲಿ ಏಕೆ ಎಂಟ್ರಿ ಆಗಿದೆ ಎಂದು ನಾನು ಮತ್ತು ನನ ತಾಯಿ ರತ್ನಮ್ಮ ಕಂದಾಯ ಕಛೇರಿಗಳಲ್ಲಿ ವಿಚಾರಣೆ ಮಾಡಿರುವುದಿಲ್ಲ. ಎದುರುದಾರ 10 ಪಶುಪತಿಗೆ ವ್ಯವಸ್ಥಾ ಪತ್ರದ ಮುಖಾಂತರ, ವಿಲ್ ಮುಖಾಂತರ ಆಸ್ತಿ

ಬಂದಿದೆ ಅಂತ ನಮ್ಮ ತಾಯಿ ರತ್ನಮ್ಮನಿಗೆ ಗೊತ್ತಿತ್ತು ಎನ್ನುವುದು ಸುಳ್ಳು. ಎ ಚೌಡಯ್ಯ ಇವರು ನಿಡಿ.11 ಮತ್ತು 12 ವ್ಯವಸ್ಥಾ ಪತ್ರದ ಮುಖಾಂತರ ಸರ್ವೆ ನಂ. 131 ಇದನ್ನು ಎದುರುದಾರ 10 ಇವನಿಗೆ ಕೊಟ್ಟಿದ್ದರಿಂದ, ಈ ಷೆಡ್ಯೂಲ್ ಆಸ್ತಿ ಎದುರುದಾರ 10 ಇವರ ಸ್ವಯಾರ್ಜಿತ ಆಸ್ತಿ ಅಂತ ನಮ್ಮ ತಾಯಿಗೆ ಗೊತ್ತಿತ್ತು ಅನ್ನುವುದು ಸುಳ್ಳು. ಹೀಗಾಗಿ ನಮ್ಮ ತಾಯಿ ರತ್ನಮ್ಮ ನಿಡಿ.11 ಮತ್ತು 12 ವ್ಯವಸ್ಥಾ ಪತ್ರ ಮತ್ತು ನಂತರದ ಕಂದಾಯ ಎಂಟ್ರಿ ಪ್ರಶ್ನೆ ಮಾಡಿಲ್ಲ ಎನ್ನುವುದು ಸುಳ್ಳು.

26. ನಮ್ಮ ತಾತ ಎ ಚೌಡಯ್ಯ ಇವರು ಕೊಟ್ಟಂತಹ ಆಸ್ತಿಗಳಲ್ಲಿ ಎ ಚೌಡಯ್ಯನ ಇತರೆ 5 ಜನ ಮಕ್ಕಳು ಅಲ್ಲಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎನ್ನುವುದು ನಿಜ. ನಿಡಿ.11 ಮತ್ತು 12 ವ್ಯವಸ್ಥಾ ಪತ್ರದ ಮುಖಾಂತರ ಬಂದಂತಹ ಆಸ್ತಿಗಳಲ್ಲಿ ಎ ಚೌಡಯ್ಯನ 5 ಜನ ಮಕ್ಕಳು ಆಯಾ ಜಾಗಗಳಲ್ಲಿ ಮನೆ ಕಟ್ಟಿಕೂಂಡಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ಈಗ ತೋರಿಸಿದ ನಿಡಿ.21 ಟಿಪ್ಪಣಿ ದಾಖಲೆ ನೋಡುತ್ತಿದ್ದೇನೆ. ಅದರಲ್ಲಿ ಕಾಣುವ ಸರ್ವೆ ನಂ. 131 /4, 131 /5, 131 /6, 131 /7 ರಲ್ಲಿ ಎ ಚೌಡಯ್ಯನ ಬೇರೆ ಮಕ್ಕಳು ಮನೆ ಕಟ್ಟಿಕೊಂಡಿದ್ದಾರೆ ಎನ್ನುವುದು ನಿಜ. ನಿಡಿ.21 ಟಿಪ್ಪಣಿ ದಾಖಲೆಯಲ್ಲಿ ನಮ್ಮ ತಾಯಿ ರತ್ನಮ್ಮನಿಗೆ ಸರ್ವೆ ನಂ. 131/8 ಕ್ಷೇತ್ರ 14 ಗುಂಟೆ ತೋರಿಸಲಾಗಿದೆ ಎಂದರೆ ಇರಬಹುದು. ನಿಡಿ.21 ಟಿಪ್ಪಣಿಯಲ್ಲಿ ಎಡಿಎಲ್ ಆರ್ ಆದೇಶದ ಪ್ರಕಾರ ಸರ್ವೆ ನಂ. 131/8 ರತ್ನಮ್ಮ ಇವರಿಗೆ ತೋರಿಸಲಾಗಿದೆ ಎಂದರೆ ಇರಬಹುದು.

ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

**ದಿನಾಂಕ 21.12.2021 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ಶ್ರೀ ಎ.ಸುನೀಲ್ ಕುಮಾರ್ ವಕೀಲರಿಂದ ಎದುರುದಾರ 11 ರವರ ಪರವಾಗಿ:**

27. 1990 ರಲ್ಲಿ ಸರ್ವೆ ನಂ.131 ದುರಸ್ತಿ ಮಾಡುವ ಕಾಲಕ್ಕೆ ನನಗೆ ಬಂದಿರುವ 10 ಗುಂಟೆ ಇದ್ದುದ್ದು 14 ಗುಂಟೆ ಅಯಿತು ಎನ್ನುವುದು ಸುಳ್ಳು. ಆ ಕ್ಷೇತ್ರ ಬದಲಾವಣೆ ಆದ ವಿಚಾರ ನಿಡಿ.21 ಹಿಸ್ಸಾ ಸರ್ವೆ ದಾಖಲೆಯಲ್ಲಿ ಕಾಣುತ್ತದೆ ಎನ್ನುವುದು ಸರಿಯಲ್ಲ. ನನಗೆ ಮೂಲತಃ ಸರ್ವೆ ನಂ.131 ರಲ್ಲಿ ಕೇವಲ 10 ಗುಂಟೆ ಬಂದಿತ್ತು ಎನ್ನುವುದು ಸರಿಯಲ್ಲ. ನಮ್ಮ ತಾಯಿ ಹೇಳಿದ ಪ್ರಕಾರ ನನಗೆ 14 ಗುಂಟೆ ಬಂದಿತ್ತು. 1990 ರ ಕಂದಾಯ ದಾಖಲೆಗಳಲ್ಲಿ ನಮ್ಮ ತಾಯಿ ರತ್ನಮ್ಮನಿಗೆ 10 ಗುಂಟೆ ಪಹಣಿ ಇತ್ತು ಅನ್ನುವುದು ನಿಜ. ಆದರೆ ನಮಗೆ 14 ಗುಂಟೆ ಬಂದಿದೆ. 1990 ರಲ್ಲಿ ಸರ್ವೆ ನಂ.131 ಇದನ್ನು ಭೌತಿಕವಾಗಿ ಅಳತೆ ಮಾಡಿ ನಿಡಿ.21 ರ ಪ್ರಕಾರ ಸರ್ವೆ ಇಲಾಖೆಯವರು ದುರಸ್ತಿ ಮಾಡಿದ್ದಾರೆ ಎನ್ನುವುದು ಸುಳ್ಳು. ಆ ದಾಖಲೆ ಸೃಷ್ಟಿ ಮಾಡಿದ್ದಾರೆ. ಈ ರೀತಿ 1990 ರಲ್ಲಿ ಸರ್ವೆ ಇಲಾಖೆಯವರು ಸ್ಥಳಕ್ಕೆ ಹೋಗಿ ದುರಸ್ತಿ ಮಾಡುವ ಕಾಲಕ್ಕೆ ಪ್ರತ್ಯೇಕ ಮಹಜರ್ ಮಾಡಿದ್ದಾರೆ ಎನ್ನುವುದು ಸುಳ್ಳು. ಆ ದಾಖಲೆಗೆ ನಮ್ಮ ಕುಟುಂಬದ ಸದಸ್ಯರು , ನಮ್ಮ ತಾಯಿ ರತ್ನಮ್ಮ, ಪಾರ್ವತಮ್ಮ, ಶಿವರಾಮಯ್ಯ, ಶಂಕರಮ್ಮ, ಎದುರುದಾರ 10 ಪಶುಪತಿ , ಹಾಜರಿದ್ದ ವ್ಯಕ್ತಿಗಳು ಸಹಿ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಸದರಿ ದಾಖಲೆಯನ್ನು ಸಂಬಂಧಪಟ್ಟ ಭೂ ಮಾಪಕರ ಕಚೇರಿಯಿಂದ ದೃಢೀಕರಿಸಿ ಪಡೆದಿದ್ದರಿಂದ ಅದನ್ನು ಸಿ.1 ಅಂತ ಗುರುತಿಸಲಾಯಿತು (court document no.1) . ಸದರಿ ಸಿ.1 ಮಹಜರ್ ಮತ್ತು ದುರಸ್ತಿ ನಕಾಶೆ ಪ್ರಶ್ನೆ ಮಾಡಿ ನಮ್ಮ ತಾಯಿ ರತ್ನಮ್ಮ ಡಿ.ಡಿ.ಎಲ್.ಆರ್ , ಮಂಡ್ಯ ಇವರಲ್ಲಿ ಅಪೀಲು ದಾಖಲು ಮಾಡಿದ್ದರು ಎನ್ನುವುದು ಸುಳ್ಳು. ನಿಡಿ.50 ರ ದಾಖಲೆ ಪ್ರಕಾರ ಶಂಕರಮ್ಮ ಮತ್ತು ಶಿವರಾಮಯ್ಯ ಡಿ.ಡಿ.ಎಲ್.ಆರ್ ಇವರ ಮುಂದೆ ಅಪೀಲು ಹಾಕಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಅಪೀಲು ವಜಾ ಅಗಿರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ಸದರಿ ಅಪೀಲು ಕಾಪಿಯನ್ನು ಈಗಾಗಲೇ ನಿಡಿ.50 ಅಂತ ಗುರುತಿಸಲಾಗಿದೆ. ಸದರಿ ನಿಡಿ.50 ಆದೇಶದ ವಿರುದ್ದ ಶಂಕರಮ್ಮ ಮತ್ತು ಇತರೆಯವರು ಮಾನ್ಯ ಕೆ.ಎ.ಟಿ , ಬೆಂಗಳೂರು ಇವರಲ್ಲಿ ಅಪೀಲು ನಂ.60 /2009 ದಾಖಲು ಮಾಡಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಅದೇ ಆದೇಶ ನಿಡಿ.51 ದಾಖಲೆಯಾಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/9 ಇದಕ್ಕೆ ಸಂಬಂಧಪಟ್ಟ ಯಾವುದೇ ಸರ್ವೆ ಅಪೀಲು ಪೆಂಡಿಂಗ್ ಇರುವುದಿಲ್ಲ ಅನ್ನುವುದು ನನಗೆ ಗೊತ್ತಿಲ್ಲ.

28. ಈ ಹಿಂದೆ ಆದಂತ ಸರ್ವೆ ನಂ.131 ಇದಕ್ಕೆ ಸಂಬಂಧಿಸಿದ ಯಾವುದೇ ಕ್ರಯ ಪತ್ರವನ್ನು ಪ್ರಶ್ನೆ ಮಾಡಿ ಸಿವಿಲ್ ನ್ಯಾಯಾಲಯದಲ್ಲಿ ಪ್ರತ್ಯೇಕ ದಾವೆ ಹಾಕಿರುವುದಿಲ್ಲ. ಅದೇ ರೀತಿ ಸರ್ವೆ ದಾಖಲೆಗಳಿಗೆ ಸಂಬಂಧಪಟ ಹಾಗೆ ದುರಸ್ತಿ ಆದೇಶ ಇತ್ಯಾದಿಗಳನ್ನು ಪ್ರಶ್ನೆ ಮಾಡಿ ನಾನು ಡಿ.ಡಿ.ಎಲ್.ಆರ್, ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ, ಜಿಲ್ಲಾಧಿಕಾರಿ ಮುಂದೆ ಅಪೀಲು ವಗ್ಯೆರೆ ಹಾಕಿರುವುದಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ರಲ್ಲಿ ಹಂಚಿಕೆ ಮಾಡಿದ ಆಸ್ತಿಗಳ ಕ್ಷೇತ್ರ ಸರಿಯಾಗಿದೆ ಅಂತ ನಮ್ಮ ತಾಯಿ ರತ್ನಮ್ಮ 1990 ರಲ್ಲಿ ಸಿ.1 ಮಹಜರ್ ಗೆ ಸಹಿ ಮಾಡಿದ್ದಾರೆ ಎನ್ನುವುದು ಸುಳ್ಳು. ಹೀಗಾಗಿ ನಮ್ಮ ತಾಯಿ ರತ್ನಮ್ಮ ಸಿ.1 ಮಹಜರ್, ನಿಡಿ.21 ಹಿಸ್ಸಾ ಸರ್ವೆ ನಕಾಶೆಯನ್ನು ಪ್ರಶ್ನೆ ಮಾಡಿ ಅಪೀಲು ಹಾಕಿಲ್ಲ ಎನ್ನುವುದು ಸುಳ್ಳು. ಶಂಕರಮ್ಮ ಮತ್ತು ಶಿವರಾಮಯ್ಯ ಇವರು ಎದುರುದಾರ 10 ಪಶುಪತಿ ಇವರ ವಿರುದ್ದ ಒ.ಎಸ್.270/2004 ಅಧಿಕ ಸಿವಿಲ್ ನ್ಯಾಯಾಲಯ ಮಂಡ್ಯ ಇವರಲ್ಲಿ ದಾಖಲು ಮಾಡಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಸದರಿ ಕೇಸನ್ನು ಮಾನ್ಯ ನ್ಯಾಯಾಲಯದವರು ವಿಚಾರಣೆ ಮಾಡಿ ಎದುರುದಾರ 10 ಪಶುಪತಿ ಪರವಾಗಿ ಆದೇಶ ಆಗಿರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ಸದರಿ ಒ.ಎಸ್.270/2004 ರಲ್ಲಿ ಎದುರುದಾರ 10 ಪಶುಪತಿ ಇವರು ಸರ್ವೆ ನಂ.131 ರಲ್ಲಿ ಪಡೆದಂತ ಆಸ್ತಿಗಳು ಅವನ ಸ್ವಯಾರ್ಜಿತ ಆಸ್ತಿಗಳು ಅಂತ ನ್ಯಾಯಾಲಯದವರು ಆದೇಶ ಕೊಟ್ಟಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ದ ಶಂಕರಮ್ಮ , ಶಿವರಾವಯ್ಯ ಆರ್.ಎ.104/2010 ಕೇಸನ್ನು 2 ನೇ ಜಿಲ್ಲಾ ನ್ಯಾಯಾಲಯ ಮಂಡ್ಯ ಇವರಲ್ಲಿ ದಾಖಲು ಮಾಡಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಸದರಿ 2 ನೇ ಜಿಲ್ಲಾ ನ್ಯಾಯಾಧೀಶರಲ್ಲಿ ಇದ್ದ ಅಪೀಲಲ್ಲಿ ಶಂಕರಮ್ಮ, ಶಿವರಾಮಯ್ಯ ಇವರು ಆದೇಶ 22 rule 1 ಅಡಿಯಲ್ಲಿ ಅರ್ಜಿ ಹಾಕಿ ಅಪೀಲು ಹಿಂದಕ್ಕೆ ತೆಗೆದುಕೊಂಡಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ.

29. ಒ.ಎಸ್ .46/2010 ರಲ್ಲಿ ಇರುವ ಷೆಡ್ಯೂಲ್ ನಲ್ಲಿ ಸರ್ವೆ ನಂ.131/ಘ, 8 ನೇ ಐಟಂ ಸರ್ವೆ ನಂ.131/ಗ ಇವೆರಡರಲ್ಲಿ ಎಸ್.ಎಲ್.ಎ.ಒ ಭೂಮಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಅಂದರೆ ಐಟಂ ನಂಬರ್ 7, 8 ರಲ್ಲಿ ರಸ್ತೆ ಹೋಗಿದೆ ಸ್ವಾಧೀನ ಪಡಿಸಿಕೊಂಡಿದ್ದಾರೆ. ಎಸ್.ಎಲ್.ಎ.ಒ ಸ್ವಾಧೀನ ಪಡಿಸಿಕೊಂಡ ಇನ್ನೆರಡು ಐಟಂ ಜಮೀನು ಒ.ಎಸ್.46/2010 ರಲ್ಲಿ ಷೆಡ್ಯೂಲ್ ಆಸ್ತಿ ಆಗಿರುವುದಿಲ್ಲ . 2 ಷ್ಷೆಡ್ಯೂಲ್ ಆಸ್ತಿಗಳನ್ನು ಎಸ್.ಎಲ್.ಎ.ಒ ಇವರು ರಸ್ತೆಗೆ ಸ್ವಾಧೀನ ಪಡಿಸಿಕೊಂಡಿದ್ದಾರೆ ಅಂತ ಒ.ಎಸ್.46/2010 ರಲ್ಲಿ ಅರ್ಜಿ ಹಾಕಿರುತ್ತೇನೋ ಹೇಗೋ ನನಗೆ ಗೊತ್ತಿಲ್ಲ. ಒ.ಎಸ್.46/2010 ರಲ್ಲಿರುವ ಐಟಂ 7 ಸರ್ವೆ ನಂ. 131/ಗ ರಲ್ಲಿ ಹಾಗೂ ಐಟಂ 8 ಸರ್ವೆ ನಂ.131/ಘ ರ ಆಸ್ತಿಗಳಲ್ಲಿ ಮಾತ್ರ ರಸ್ತೆಗೆ ಹೋಗಿದೆ. ಉಳಿದ ಜಮೀನಲ್ಲಿ ರಸ್ತೆ ಹೋಗಿದೆ ಆದರೆ ಆ ಸರ್ವೆ ನಂಬರ್ ಒ.ಎಸ್.46/2010 ರಲ್ಲಿ ಷೆಡ್ಯೂಲ್ ಆಗಿರುವುದಿಲ್ಲ.

30. ಎದುರುದಾರ 10 ಪಶುಪತಿ ಇವರು ತಮ್ಮ ಮನೆತನದ ದರ್ದು ನಿಮಿತ್ತ , ಹಣದ ಅವಶ್ಯಕತೆಗಾಗಿ ಸರ್ವೆ ನಂ.131/9 ಕ್ಷೇತ್ರ 5 ಎಕರೆ 33 ಗುಂಟೆ ಜಮೀನನ್ನು 2008 ರಲ್ಲಿ ಮಾರಾಟ

ಮಾಡಿದ್ದಾರೆ ಎನ್ನುವುದು ಸುಳ್ಳು. ಎದುರುದಾರ 11 ಕೃಷ್ಣಪ್ಪ ಇವರು 2008 ರಲ್ಲಿ ಕ್ರಯಪತ್ರವನ್ನು ರದ್ದುಪಡಿಸಿಕೊಂಡಿರುತ್ತಾರೆ ಅನ್ನುವುದು ಸುಳ್ಳು. ಎದುರುದಾರ 10 ಪಶುಪತಿ ಮತ್ತು ಮಕ್ಕಳು ಕೂಡಿಕೊಂಡು ಬೋರಮ್ಮ ಕೋಂ ಹೊನ್ನೇಗೌಡ ಇವರಿಗೆ ಸರ್ವೆ ನಂ.131/9 ಕ್ಷೇತ್ರ 5 ಎಕರೆ 33 ಗುಂಟೆ ಜಮೀನನ್ನು ದಿನಾಂಕ 06.01.2009 ರಂದು ಕ್ರಯಕ್ಕೆ ಕೊಟ್ಟಿರುತ್ತಾರೆ ಎನ್ನುವುದು ಸುಳ್ಳು. ಅದೇ ಕ್ರಯ ಪತ್ರ ನಿಡಿ.28 ಆಗಿರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ಬೋರಮ್ಮನ ಹೆಸರಿಗೆ ಸರ್ವೆ ನಂ.131/9 ಜಮೀನು ಖಾತೆ ಮಾಡಬಾರದು ಅಂತ ಶಿವರಾಮಯ್ಯ ಮತ್ತು ಶಂಕರಮ್ಮ ಇವರು ಮಾನ್ಯ ಉಪವಿಭಾಗಾಧಿಕಾರಿ ಮಂಡ್ಯ ಇವರಲ್ಲಿ ತಕರಾರು ಮಾಡಿದ್ದರು ಎಂದರೆ ಇರಬಹುದು. ಸದರಿ ನಿಡಿ.42 ಆದೇಶ ಪ್ರಕಾರ ಮಾನ್ಯ ಉಪವಿಭಾಗಾಧಿಕಾರಿ ಇವರ ಅಪೀಲು ವಜಾ ಮಾಡಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ಬೋರಮ್ಮ ತೀರಿಕೊಂಡ ನಂತರ ಅವರ ಮಗ ಎದುರುದಾರ 11 ಕೃಷ್ಣಪ್ಪ ಇವರು ತನ್ನ ಅಣ್ಣ ತಮ್ಮಂದಿರ ಒಪ್ಪಿಗೆ ಪಡೆದು ತನ್ನ ಹೆಸರಿಲ್ಲಿ ಸರ್ವೆ ನಂ.131/9 ಜಮೀನು ಖಾತೆ ಪಹಣಿ ಮಾಡಿಸಿಕೊಂಡಿದ್ದಾರೆ ಅನ್ನುವುದು ಸುಳ್ಳು. ಎದುರುದಾರ 11 ಕೃಷ್ಣಪ್ಪ ಹೆಸರಿನಲ್ಲಿ ಖಾತೆ ಪಹಣಿ ಮಾಡಲು ನಮ್ಮ ತಾಯಿ ರತ್ನಮ್ಮ ತಹಶೀಲ್ದಾರ್ ಮಂಡ್ಯ ಇವರ ಮುಂದೆ ತಕರಾರು ಕೊಟ್ಟಿದ್ದಾಳೆ ಎನ್ನುವುದು ನಿಜ. ತಹಶೀಲ್ದಾರ್ ಇವರು ನಮ್ಮ ತಾಯಿ ರತ್ನಮ್ಮ ಕೊಟ್ಟ ತಕರಾರನ್ನು ತಳ್ಳಿ ಹಾಕಿದ್ದಾರೆ ಎಂದರೆ ಇರಬಹುದು. ತಹಶೀಲ್ದಾರ್ ಮಂಡ್ಯ ಇವರು 2013 ರಲ್ಲಿ ಮಾಡಿದ ಆದೇಶದ ವಿರುದ್ದ ನಮ್ಮ ತಾಯಿ ರತ್ನಮ್ಮ ಮಾನ್ಯ ಉಪ ವಿಭಾಗಾಧಿಕಾರಿ ಮಂಡ್ಯ ಇವರ ಮುಂದೆ R.Misc.212/2009-10 ದಾಖಲು ಮಾಡಿದ್ದರು ಎನ್ನುವುದು ನಿಜ. ಸದರಿ ಅಪೀಲನ್ನು ಮಾನ್ಯ ಉಪ ವಿಬಾಗಾಧಿಕಾರಿ ಮಂಡ್ಯ ಇವರು ದಿನಾಂಕ 09.04.2013 ರಂದು ವಜಾ ಮಾಡಿದ್ದಾರೆ ಅನ್ನುವುದು ಸರಿಯಲ್ಲ. ಒ.ಎಸ್.46/2010 ರಲ್ಲಿ ತೀರ್ಮಾನ ಮಾಡಿಕೊಳ್ಳಿ ಅಂತ ಹೇಳಿದರು. ಎದುರುದಾರ 11 ಕೃಷ್ಣಪ್ಪ ಇವರಿಗೆ ಕಾನೂನು ಪ್ರಕಾರ ತನ್ನ ತಾಯಿಯಿಂದ ಜಮೀನು ಖಾತೆ ಪಹಣಿ ಮಾಡಿಕೊಳ್ಳಲು ಹಕ್ಕು ಉಳ್ಳವರಾಗಿರುತ್ತಾರೆ ಅಂತ ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಮಂಡ್ಯ ಆದೇಶ ಮಾಡಿದ್ದಾರೆ ಎನ್ನುವುದು ಸುಳ್ಳು.

31. ಎದುರುದಾರ 10 ಪಶುಪತಿ ಇವರು ಬೋರಮ್ಮ ಕೋಂ ಹೊನ್ನೇಗೌಡ ಇವರಿಗೆ ಮಾರಾಟ ಮಾಡಿದ ಸರ್ವೆ ನಂ.131/9 ರಲ್ಲಿ ನನಗೆ ನಮ್ಮ ಚಿಕ್ಕಮ್ಮ ಪುಟ್ಟತಾಯಮ್ಮನಿಗೆ ಹಕ್ಕು ಇಲ್ಲ ಎನ್ನುವುದು ಸುಳ್ಳು. ಸರ್ವೆ ನಂ.131/9 ಇದಕ್ಕೆ ಎದುರುದಾರ 10 ಪಶುಪತಿ ಮಾತ್ರ ಮಾಲೀಕರು ಆಗಿದ್ದರು ಎನ್ನುವುದು ಸುಳ್ಳು. ಸರ್ವೆ ನಂ.131/9 ಕ್ಷೇತ್ರ 5 ಎಕರೆ 33 ಗುಂಟೆ ಇದು ಈಗಲೂ ಎದುರುದಾರ 11 ಕೃಷ್ಣಪ್ಪ ಇವರ ಹೆಸರಿನಲ್ಲಿ ಕಂದಾಯ ದಾಖಲೆ ಇವೆ ಎನ್ನುವುದು ನಿಜ. ಆದರೆ ಅವು ಸುಳ್ಳು ದಾಖಲೆ. ಎದುರುದಾರ 11 ಕೃಷ್ಣಪ್ಪನ ಮಾಲೀಕತ್ವಕ್ಕೆ ಸೇರಿದ ಸರ್ವೆ ನಂ.131/9 ಜಮೀನನ್ನು ಎಸ್.ಎಲ್.ಎ.ಒ ಸ್ವಾದೀನ ಪಡಿಸಿಕೊಂಡಿದ್ದಾರೆ ಅನ್ನುವುದು ಸರಿಯಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/9 ಕ್ಷೇತ್ರ 202 sq mtr ಗೆ ಸಂಬಂಧಿಸಿದ ರೂ.24,89,660/- ಹಣ ಎದುರುದಾರ 11 ಕೃಷ್ಣಪ್ಪನಿಗೆ ಸಲ್ಲತಕ್ಕದ್ದು ಎನ್ನುವುದು ಸುಳ್ಳು. ನನ್ನ ತಾಯಿ ರತ್ನಮ್ಮ ಇವರು ಮೂಲ ಪುರುಷ ಎ.ಚೌಡಯ್ಯ ಇವರ ಮೊಮ್ಮಗಳು ಅಂತ ತೋರಿಸುವ ಸರ್ಕಾರಿ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ಅದೇ ರೀತಿ ನಮ್ಮ ಚಿಕ್ಕಮ್ಮನಾದ ಪುಟ್ಟತಾಯಮ್ಮ ಇವಳು ಎ.ಚೌಡಯ್ಯನ ಮೊಮ್ಮಗಳು ಅಂತ ತೋರಿಸುವ ಸರ್ಕಾರಿ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ.

ನಮ್ಮ ತಾಯಿ ರತ್ನಮ್ಮ ಉಮ್ಮಡಹಳ್ಳಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಮ್ಮ ತಾಯಿ ರತ್ನಮ್ಮ ಉಮ್ಮಡಹಳ್ಳಿ ಮತ್ತು ಶ್ರೀನಿವಾಸಪುರದ ಯಾವುದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಅದೇ ರೀತಿ ನಮ್ಮ ಚಿಕ್ಕಮ್ಮ ಪುಟ್ಟತಾಯಮ್ಮ ಯಾವುದೇ ಶಾಲೆಯಲ್ಲಿ ಅಭ್ಯಾಸ ಮಾಡಿಲ್ಲ. ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಇವರಿಗ ಎದುರುದಾರ 10 ಪಶುಪತಿ ಮಾತ್ರ ಒಬ್ಬನೇ ಮಗ ಆಗಿರುತ್ತಾನೆ ಎನ್ನುವುದು ಸುಳ್ಳು. ತಮ್ಮಯ್ಯ ಇವರಿಗೆ ನಾನು ಹೇಳುವಂತ 2 ಜನ ಹೆಣ್ಣು ಮಕ್ಕಳು ಇರಲಿಲ್ಲ ಎನ್ನುವುದು ಸುಳ್ಳು. ಈ ಕೇಸಲ್ಲಿರುವ ಪರಿಹಾರವನ್ನು ಹೇಗಾದರೂ ಮಾಡಿ ಪಡೆಯಬೇಕು ಅಂತ ಈ ರೀತಿ ಸುಳ್ಳು ತಕರಾರು ಹಾಕಿ ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಈಗ ತೋರಿಸಿದ ನಿಡಿ.55 ದಾನ ಪತ್ರ ದಿನಾಂಕ 17.11.2011 ನೋಡುತ್ತಿದ್ದೇನೆ. ಸದರಿ ನಿಡಿ.55 ದಾನ ಪತ್ರದ ಪ್ರಕಾರ ಶೋಭಾ ಇವರಿಗೆ ಉಮ್ಮಡಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಸೈಟು ಖಾತೆಯಾಗಿದೆ . ಸದರಿ ಆಸ್ತಿ ನಂಬರ್ 83 ಕ್ರಮ ಸಂಖ್ಯೆ 246 ಇದರ ಪಂಚಾಯಿತಿ ದಾಖಲೆ ಹಾಜರು ಮಾಡಿರುವುದಿಲ್ಲ. ನಿಡಿ.55 ದಾನ ಪತ್ರ ಬೋಗಸ್ ಅಂತ ಪಂಚಾಯಿತಿಯವರು ಪರಿಗಣಿಸಿ ಶೋಭಾ ಇವರ ಹೆಸರಿನಲ್ಲಿ ಇದ್ದ ಖಾತೆ ರದ್ದು ಪಡಿಸಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ನಿಡಿ.55 ದಾನ ಪತ್ರಕ್ಕೂ ಎದುರುದಾರ 11 ಕೃಷ್ಣಪ್ಪನಿಗೂ ಸಂಬಂಧ ಇಲ್ಲ ಎನ್ನುವುದು ನಿಜ.

**<u>ಪಾಟೀ ಸವಾಲು : ಶ್ರೀ ಎಸ್.ಜಗನ್ನಾಥ್ ವಕೀಲರಿಂದ ಎದುರುದಾರ 21 ರವರ ಪರವಾಗಿಃ</u>**

32 . ಸರ್ವೆ ನಂ.131 /9 ಇದು ಮೊದಲು ಎದುರುದಾರ 10 ಪಶುಪತಿಗೆ ಸೇರಿದ್ದು ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿ ಹೇಳುತ್ತಾನೆ ಅದು ನಮ್ಮ ತಾಯಿ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸರ್ವೆ ನಂ.131/9 ಇದು ಎದುರುದಾರ 10 ಪಶುಪತಿ ಇವರ ಸ್ವಯಾರ್ಜಿತ ಆಸ್ತಿ ಆಗಿರುತತದೆ ಎನ್ನುವುದು ಸುಳ್ಳು. ಎದುರುದಾರ 10 ಪಶುಪತಿ, ಹೆಂಡತಿ, ಮಕ್ಕಳು ಕೂಡಿಕೊಂಡು ದಿನಾಂಕ 09.04.2004 ರಂದು ಎದುರುದಾರ 21 ವಿವೇಕಾನಂದ ಇವರಿಗೆ ಸರ್ವೆ ನಂ.131/9 ಕ್ಷೇತ್ರ 2 ಎಕರೆ 20 ಗುಂಟೆ ಜಮೀನು ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎನ್ನುವುದು ಸುಳ್ಳು. ಎದುರುದಾರ 21 ಇವರ ಹೆಸರಿಗೆ ಆದ ಕರಾರು ಪತ್ರ ಸರಿಯಲ್ಲ ಅಂತ ನಾನು ನಮ್ಮ ತಾಯಿ ರತ್ನಮ್ಮ ಸಂಬಂಧಪಟ ನ್ಯಾಯಾಲಯದಲ್ಲಿ ಸಿವಿಲ್ ಕೇಸು ಹಾಕಿ ಪ್ರಶ್ನೆ ಮಾಡಿರುವುದಿಲ್ಲ. ಎದುರುದಾರ 21 ವಿವೇಕಾನಂದ ಇವರಿಗೆ ಕರಾರು ಪತ್ರದ ಪ್ರಕಾರ ಕ್ರಯ ಪತ್ರ ಬರೆದು ಕೊಡಬೇಕು ಅಂತ ಒ.ಎಸ್.249/2006 ರಲ್ಲಿ ಡಿಕ್ರಿ ಆಗಿದೆ ಅನ್ನುವುದು ನನಗೆ ಗೊತ್ತಿಲ್ಲ. ಎದುರುದಾರ 10 ಪಶು ಪತಿ , 11 ಕೃಷ್ಣ ಇವರು ಸದರಿ ಡಿಕ್ರಿಯನ್ನು ಮಾನ್ಯ ಜಿಲ್ಲಾ ನ್ಯಾಯಾಲಯ ಮಂಡ್ಯ ಇವರಲ್ಲಿ ಆರ್.ಎ.52/2017 ರಲ್ಲಿ ಪ್ರಶ್ನೆ ಮಾಡಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಸದರಿ ಆರ್.ಎ.52/2017 ರಲ್ಲಿ ಮಾನ್ಯ 2 ನೇ ಜಿಲ್ಲಾ ನ್ಯಾಯಾಧೀಶರು ಆದೇಶ ಮಾಡಿ ನೀವು ಹಣ ಬಡ್ಡಿ ಸಮೇತ ತೆಗೆದುಕೊಳ್ಳಬಹುದು ಅಂತ ಆದೇಶ ಮಾಡಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಸದರಿ ತೀರ್ಪಿನ ವಿರುದ್ಧ ಎದುರುದಾರ 21 ವಿವೇಕಾನಂದ ಇವರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇವರಲ್ಲಿ RSA 1187/2019 ದಾಖಲು ಮಾಡಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RSA 1187/2019 ಚಾಲ್ತಿ ಇರುವುದರಿಂದ ಸರ್ವೆ ನಂ.131/9 ರಲ್ಲಿ ಇರುವ ಜಮೀನಿನ ಪರಿಹಾರ ಎದುರುದಾರ 21 ವಿವೇಕಾನಂದ ಇವರಿಗೆ ಸಲ್ಲತಕ್ಕದು

ಎನ್ನುವುದು ಸುಳ್ಳು. ಸರ್ವೆ ನಂ.131/9 ಇದಕ್ಕೆ ಸಂಬಂಧಿಸಿದ ಪರಿಹಾರ ಹಣದಲ್ಲಿ ನನಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎನ್ನುವುದು ಸುಳ್ಳು. ಎದುರುದಾರ 21 ವಿವೇಕಾನಂದ ಇವರಿಗೆ ಸಲ್ಲಬೇಕಾದ ಪರಿಹಾರ ಹಣವನ್ನು ಪಡೆಯಬೇಕು ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಶ್ರೀ ಹೆಚ್.ಎಸ್.ಎನ್ ವಕೀಲರು, ಎ.ಕೆ ವಕೀಲರು, ಎನ್.ಆರ್ ವಕೀಲರು ಇರುವುದಿಲ್ಲ . ಎದುರುದಾರ** 33 **ರಿಂದ** 35 **,** 37**,** 45 **, ಉಳಿದ ಎದುರುದಾರರು ಇರುವುದಿಲ್ಲ . ಸಾಕಾಷ್ಟು ಕಾಲಾವಕಾಶ ಕೊಡಲಾಗಿದೆ. ಹೀಗಾಗಿ ಉಳಿದ ಎದುರುದಾರರ ಪರವಾಗಿ ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.